# ಹಣಕಾಸು ಅರಿವಿನ ಸಂದೇಶಗಳು, (ಫೇಮ್)

## ಎಫ್.ಐ.ಡಿ.ಡಿ, ಕೇಂದ್ರ ಕಛೇರಿ



ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ಇಲಾಖೆ
ಭಾರತೀಯ ರಿಸರ್ವ್ ಬ್ಯಾಂಕ್, ಆರ್.ಬಿ.ಐ

**ಹೊಣೆ ನಿರಾಕರಣೆ**

ಓದುಗರನ್ನು ಹಣಕಾಸು ಸಾಕ್ಷರರನ್ನಾಗಿ ಮಾಡುವ ಪ್ರಾಮಾಣಿಕ ಉದ್ದೇಶದಿಂದ ಓದಲು ಮತ್ತು ಬೋಧಿಸಲು ಬಳಸುವ ಪಠ್ಯ ವಿಷಯವಾಗಿ ಈ ಪುಸ್ತಕವನ್ನು ಪ್ರಸ್ತುತಪಡಿಸುತ್ತಿದ್ದೇವೆ. ಓದುಗನು ಒಂದು ನಿರ್ದಿಷ್ಟ ಹಣಕಾಸು ಉತ್ಪನ್ನ/ ಸೇವೆಯನ್ನು ಬಳಸುವ ನಿರ್ಧಾರ ಕೈಗೊಳ್ಳುವಂತೆ ಪ್ರಭಾವಿಸುವ ಉದ್ದೇಶ ಇದಕ್ಕಿಲ್ಲ.

**ಕೃತಿ ಸ್ವಾಮ್ಯ:**

ಇದರ ಮೂಲ ಆಕರವನ್ನು ಸ್ಮರಿಸಿದಲ್ಲಿ ಮಾತ್ರ ಇದನ್ನು ಪುನರ್ ಪ್ರಕಟಿಸಬಹುದು

**ಮೂರನೇ ಆವೃತ್ತಿ – ಜುಲೈ 2020**

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಮುದ್ರಿಸಲ್ಪಟ್ಟಿದೆ

भारतीय रिज़र्व बैंक

**ಭಾರತೀಯ ರಿಸರ್ವ್ ಬ್ಯಾಂಕ್**

ಭಾರತದ ಕೇಂದ್ರ ಬ್ಯಾಂಕ್

**ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ಇಲಾಖೆ**

10ನೇ ಮಹಡಿ, ಶಹೀದ್ ಭಗತ್ ಸಿಂಗ್ ರಸ್ತೆ ಕೋಟೆ, ಮುಂಬೈ - 400001

**ಕೃತಜ್ಞತೆಗಳು**

ವಿನ್ಯಾಸ : ಕೌಶಿಕ್ ರಾಮಚಂದ್ರನ್

# ಪರಿವಿಡಿ

## ಹಣಕಾಸು ಸಾಮರ್ಥ್ಯಗಳು

ಸಂದೇಶ 1 - ಸಾಲದ ಮೇಲಿನ ಬಡ್ಡಿ ...01
ಸಂದೇಶ 2 - ಚಕ್ರ ಬಡ್ಡಿ ...02
ಸಂದೇಶ 3 - ಹಣದುಬ್ಬರ ...04
ಸಂದೇಶ 4 - ಹಣದ ಕಾಲ ಮೌಲ್ಯ ...05
ಸಂದೇಶ 5 - ಸಂಭಾವ್ಯ ನಷ್ಟ ಹಾಗೂ ಇಳುವರಿ ...07
ಸಂದೇಶ 6 - ವೈವಿಧ್ಯತೆ ...08

## ಮೂಲ ಬ್ಯಾಂಕಿಂಗ್

ಸಂದೇಶ 7 - ಆಯವ್ಯಯ , ಉಳಿತಾಯ ಮತ್ತು ಜವಾಬ್ದಾರಿಯುತ ಸಾಲ ...10
ಸಂದೇಶ 8 - ಠೇವಣಿ ಖಾತೆಗಳು ...13
ಸಂದೇಶ 9 - ಋಣಾಂಕ ...14
ಸಂದೇಶ 10 - ಹೊಸ ವರ್ಗದ ಬ್ಯಾಂಕುಗಳು ಮತ್ತು ವ್ಯವಹಾರ ಪ್ರತಿನಿಧಿಗಳು ...15

## ಗಣಕೀಕೃತ ಹಣಕಾಸು ಸಾಕ್ಷರತೆ

ಸಂದೇಶ 11 - ಸಣ್ಣ ಮೊತ್ತದ ರವಾನೆ ...17
ಸಂದೇಶ 12 - ಏಕೀಕೃತ ಪಾವತಿಗಳ ಸಂಪರ್ಕ ...18
ಸಂದೇಶ 13 - ವಿದ್ಯುನ್ಮಾನ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಮಾಡಬೇಕಾದ ಮತ್ತು ಮಾಡಬಾರದ ಸಂಗತಿಗಳು ...20
ಸಂದೇಶ 14 - ಯಾವುದೇ ಸಂದರ್ಭದಲ್ಲಿ ಎಟಿಎಂ ವ್ಯವಹಾರಗಳಲ್ಲಿ ಮಾಡಬೇಕಾದದ್ದು ಮತ್ತು ಮಾಡಬಾರದ್ದು ...21
ಸಂದೇಶ 15 - ಮೋಸದ ಗಣಕೀಕೃತ ವ್ಯವಹಾರಗಳಲ್ಲಿ ಗ್ರಾಹಕರ ಹೊಣೆಗಾರಿಕೆ ...23

## ಗ್ರಾಹಕ ಸಂರಕ್ಷಣೆ

ಸಂದೇಶ 16 – ತಪ್ಪು ಮಾರಾಟ ...25
ಸಂದೇಶ 17 – ಸಚೇತ್ ಪೋರ್ಟಲ್ ...26
ಸಂದೇಶ 18 – ನಂಬಲಿಕ್ಕಾಗದಷ್ಟು ಒಳ್ಳೆಯದೇ ? ...27
ಸಂದೇಶ 19 – ದೂರು ನಿವಾರಣಾ ಕಾರ್ಯವಿಧಾನ ...29
ಸಂದೇಶ 20 – ಆರ್.ಬಿ.ಐ ನ ದೂರು ನಿರ್ವಹಣಾ ವ್ಯವಸ್ಥೆ ...31

ಹಣಕಾಸು ಅರಿವಿನ ಸಂದೇಶಗಳು (ಫೇಮ್)

# ಹಣಕಾಸು ಸಾಮರ್ಥ್ಯಗಳು




ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ಇಲಾಖೆ

ಭಾರತೀಯ ರಿಸರ್ವ್ ಬ್ಯಾಂಕ್, ಆರ್.ಬಿ.ಐ

# ಸಂದೇಶ–1 { ಸಾಲದ ಮೇಲಿನ ಬಡ್ಡಿ }

ಒಂದು ವರ್ಷದ ಅವಧಿಗೆ ನೀವು ₹100ನ್ನು ಬ್ಯಾಂಕಿನಿಂದ ಸಾಲವಾಗಿ ಪಡೆಯಿರಿ




ಆಗ ನಿಮಗೆ ಬ್ಯಾಂಕ್ ವರ್ಷಕ್ಕೆ ಶೇಕಡ 10ರಷ್ಟು ಸರಳ ಬಡ್ಡಿಯನ್ನು ಪಾವತಿಸುವಂತೆ ಹೇಳುತ್ತದೆ

ಇದರ ಅರ್ಥವೇನೆಂದರೆ ವರ್ಷಾಂತ್ಯದಲ್ಲಿ ನೀವು (ಸಾಲದ ಮೊತ್ತ) ₹ 100ನ್ನು ಮತ್ತು ₹ 10ಗಳ (ಸರಳ ಬಡ್ಡಿಯನ್ನು) ಅಂದರೆ ಒಟ್ಟಾರೆ ₹ 110 ಗಳನ್ನು ಪಾವತಿಸಬೇಕಾಗುತ್ತದೆ.

---

ಸರಳ ಬಡ್ಡಿಯ* ಲೆಕ್ಕಾಚಾರ

$$\left(₹100 \times \frac{10}{100}\right) \times 1 = ₹10$$

ಎಂದರೆ

$$I = \left(P \times \frac{r}{100}\right) \times n$$

ಇಲ್ಲಿ $P$ = ಅಸಲು , $I$ = ಬಡ್ಡಿ , $n$ = ವರ್ಷಗಳ ಅವಧಿ $r$ = ಬಡ್ಡಿದರ

---



## ಆದರೆ ಜಾಗ್ರತರಾಗಿರಿ !!!

- ಯಾವಾಗಲೂ ಸಾಲ ಮಂಜೂರಾತಿ ಪತ್ರದಲ್ಲಿರುವ ನಿಬಂಧನೆಗಳನ್ನು ಸರಿಯಾಗಿ ಓದಿರಿ. ಅವುಗಳು ಬೇರೆ ಬೇರೆ ಸಂಸ್ಥೆಗಳಲ್ಲಿ ವಿಭಿನ್ನವಾಗಿರಬಹುದು
- ಯಾವಾಗಲೂ ಅಂತಿಮಗೊಳಿಸಲ್ಪಟ್ಟ ಮುದ್ರಿತ ಪ್ರತಿಯನ್ನು ಓದಿರಿ ಕೆಲವು ಸಂಸ್ಥೆಗಳು ನಾವು ಶೇಕಡ 2ರಷ್ಟು ಮಾತ್ರ ಬಡ್ಡಿಯನ್ನು ಪಡೆಯುತ್ತೇವೆಂದು ಹೇಳಿದರೂ (ಪ್ರತಿ ತಿಂಗಳಿಗೆ ಎಂದು ಸಣ್ಣ ಅಕ್ಷರಗಳಲ್ಲಿ ನಮೂದಿಸಿರುತ್ತಾರೆ) ಅಂದರೆ ಅದು ವಾಸ್ತವಿಕವಾಗಿ ವರ್ಷಕ್ಕೆ 24% ಆಗಿರುತ್ತದೆ.
- ಬಡ್ಡಿದರದ ನಿಜವಾದ ಪ್ರಮಾಣವೇನೆಂಬುದನ್ನು ಅರಿಯಲು ಯಾವಾಗಲೂ ವರ್ಷದ ಅವಧಿಗೆ ಅದರ ಪ್ರಮಾಣವನ್ನು ಲೆಕ್ಕ ಮಾಡಬೇಕು. ಆಗ ನಿಮಗೆ ಅದು ನಿಮ್ಮ ಹಣಕಾಸಿನ ಮೇಲೆ ಯಾವ ಮಟ್ಟದ ಪರಿಣಾಮವನ್ನು ಬೀರುತ್ತದೆಂದು ತಿಳಿದುಬರುತ್ತದೆ.

* ಸರಳ ಬಡ್ಡಿ ಪ್ರಮಾಣ ದರದಲ್ಲಿ ಬ್ಯಾಂಕುಗಳು ಸಾಲ ನೀಡುವುದಿಲ್ಲ

# ಸಂದೇಶ–2 ಚಕ್ರ ಬಡ್ಡಿ

ಬಡ್ಡಿಯ ಮೇಲಿನ ಬಡ್ಡಿಯನ್ನು ಚಕ್ರಬಡ್ಡಿಯೆಂದು ಕರೆಯಲಾಗುತ್ತದೆ. ಇದರಲ್ಲಿರುವ ಲಾಭವೆಂದರೆ ಗಳಿಸಿದ ಬಡ್ಡಿಯನ್ನು ಮೂಲಧನಕ್ಕೆ ಸೇರಿಸಲಾಗುತ್ತದೆ ಮತ್ತು ಅದನ್ನು ಬೇರೆಡೆಯಲ್ಲಿ ಹೂಡಲಾಗುತ್ತದೆ. ಆದ್ದರಿಂದ ಮೂಲಧನದೊಂದಿಗೆ ಬಡ್ಡಿಯನ್ನೂ ಸೇರಿಸಿ ಅದರ ಮೇಲೆ ಬಡ್ಡಿ ಹಾಕುವುದರಿಂದಾಗಿ ಗಳಿಕೆ ಹೆಚ್ಚುತ್ತದೆ.



ಮತ್ತು ಈ ಪ್ರಕ್ರಿಯೆ ಧೀರ್ಘಾವಧಿಯಲ್ಲಿ ಮುಂದುವರೆದಾಗ ಸರಳ ಬಡ್ಡಿ*ಯೊಂದಿಗೆ ಅದನ್ನು ಹೋಲಿಸಿದರೆ ಸಂದಾಯಗಳು ಅಥವ ಸಲ್ಲಿಕೆಗಳು (**returns**) ದ್ವಿಗುಣಿತವಾಗುತ್ತದೆ.!

| | |
|---|---|
| **ವರ್ಷ – 1** | |
| ಮೂಲಧನ | ₹ 10,000 |
| ಶೇಕಡ 10% ಬಡ್ಡಿದರದಲ್ಲಿ | ₹ 1,000 |
| ಮೊದಲನೇ ವರ್ಷಾಂತ್ಯದಲ್ಲಿ ಬಂದ ಮೊತ್ತ | ₹ 11,000 |
| **ವರ್ಷ – 2** | |
| ಶೇಕಡ 10% ರಷ್ಟು ಬಡ್ಡಿಯನ್ನು ವರ್ಷವೊಂದಕ್ಕೆ ಚಕ್ರಬಡ್ಡಿಗೆ ಒಳಪಡಿಸಲಾಗಿದೆ. (ಅಂದರೆ, ₹ 1000 ಬಡ್ಡಿಯು ಮೂಲಧನ. ₹ 10,000ದೊಂದಿಗೆ ಸೇರಿದಾಗ ಅದು ಒಟ್ಟು ₹ 11,000 ವಾಗುತ್ತದೆ.) | ₹ 1,100 |
| ಅದರ ಮೇಲಿನ ಬಡ್ಡಿ ₹ 1,100 , 2ನೇ ವರ್ಷದ ಅಂತ್ಯದ ವೇಳೆಗೆ ಮೊತ್ತ | ₹ 12,100 |
| **ವರ್ಷ – 3** | |
| ₹ 12,100 ಗಳ ಮೇಲೆ 10% ವಾರ್ಷಿಕ ಚಕ್ರ ಬಡ್ಡಿ (2ನೇ ವರ್ಷಾಂತ್ಯಕ್ಕೆ) | ₹ 1,210 |
| 3ನೇ ವರ್ಷದ ಅಂತ್ಯದ ವೇಳೆಗೆ ಮೊತ್ತ | ₹13,310 |

## ಚಕ್ರಬಡ್ಡಿಯ ಸೂತ್ರ

$$A = P \times \left(1 + \frac{r}{n}\right)^{n \times t}$$

ಇಲ್ಲಿ **A** ಅಕ್ಷರವನ್ನು ಮೊತ್ತವೆಂದು ಪರಿಗಣಿಸಲಾಗಿದೆ. **P** ಅಂದರೆ ಮೂಲಧನವೆಂದು ಅರ್ಥ. r ಅಂದರೆ ಬಡ್ಡಿದರ ಪ್ರಮಾಣ (ದಶಮಾಂಶ). 'n' ಅಂದರೆ ವರ್ಷವೊಂದರಲ್ಲಿ ಎಷ್ಟು ಬಾರಿ ಚಕ್ರ ಬಡ್ಡಿ ಸೇರ್ಪಡೆಯಾಯಿತು. 't' : ಅಂದರೆ ಕಾಲಾವಧಿ (ವರ್ಷಗಳಲ್ಲಿ)

* ಸರಳ ಬಡ್ಡಿ ಪ್ರಮಾಣ ದರದಲ್ಲಿ ಬ್ಯಾಂಕುಗಳು ಸಾಲ ನೀಡುವುದಿಲ್ಲ



## ಚಕ್ರಬಡ್ಡಿಕರಣದ ಶಕ್ತಿ :

₹ 10,000 ಗಳನ್ನು 10% ಸರಳ ಬಡ್ಡಿಯಂತೆ 10 ವರ್ಷಕ್ಕೆ ಹೂಡಿದಾಗ ಅದು ₹ 20,000 ಆಗುತ್ತದೆ.

ಆದರೆ

10% ಬಡ್ಡಿಯನ್ನು 3 ತಿಂಗಳಗೊಮ್ಮೆ ಚಕ್ರ ಬಡ್ಡಿಯನ್ನಾಗಿ ಮಾಡಿದರೆ ಅದು ₹ 26,851ಗಳಾಗುತ್ತದೆ.

[ = 10000 * (1+((10/100/4)))^4*10

= 10000 * 2.6851

= 26,851 ]

ಆದ್ದರಿಂದ ಚಕ್ರಬಡ್ಡಿಯು ₹ 6851 ಅಥವ 34% ನಷ್ಟು ಹೆಚ್ಚು ಗಳಿಸುತ್ತದೆ !!!

**ನೆನಪಿಡಿ**

**ಹಣವನ್ನು ಧೀರ್ಘ ಕಾಲಾವಧಿಯವರೆಗೆ ಚಕ್ರ ಬಡ್ಡಿಯ ಆಧಾರದ ಮೇಲೆ ಹೂಡಿದಾಗ ಅದು ಅಪಾರವಾದ ಲಾಭವನ್ನು ತರುತ್ತದೆ**

• *ಸರಳ ಬಡ್ಡಿ ಪ್ರಮಾಣ ದರದಲ್ಲಿ ಬ್ಯಾಂಕುಗಳು ಸಾಲ ನೀಡುವುದಿಲ್ಲ*

# ಸಂದೇಶ–3 { ಹಣದುಬ್ಬರ }



**2019**
₹ 100ಗೆ 1 ಕೆ.ಜಿ ಮಾವಿನ ಹಣ್ಣು ದೊರಕಿತೆಂದು ತಿಳಿದುಕೊಳ್ಳಿ



**2020**
ಅದೇ 1 ಕೆ.ಜಿ ಇದೀಗ ₹ 110 ಗಳಾಗುತ್ತದೆ.

## ಹಣದುಬ್ಬರ 1 ವರ್ಷದಲ್ಲಿ

ಹಣದುಬ್ಬರ = ₹ 110 – ₹ 100 = ₹ 10

ಅಥವ

$(10/100)*100 = 10\%$



ಆದ್ದರಿಂದ ಹಣದುಬ್ಬರವೆಂದರೆ ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಸರಕುಗಳ ಮತ್ತು ಸೇವೆಗಳ ಬೆಲೆ ಏರಿಕೆಯ ಪ್ರಮಾಣ. ಇದು ಜೀವನ ನಿರ್ವಹಣೆಯ ವೆಚ್ಚವನ್ನು ಹೆಚ್ಚಿಸುತ್ತದೆ.

### ಕೆಳಗಿನ ಸನ್ನಿವೇಶಗಳನ್ನು ಪರಿಗಣಿಸಿ

**ಸನ್ನಿವೇಶ 1**

ವರ್ಷಕ್ಕೆ 6% ನಷ್ಟು ಬಡ್ಡಿಗೆ ಹಣವನ್ನು ಠೇವಣಿ ಇಡಲಾಗಿದೆ

ಪಾವತಿಗಳು – 6%

ಹಣದುಬ್ಬರ – 4%

ಹಣ ಇಳುವರಿಯ ನೈಜ ಪ್ರಮಾಣ:

ಇಳುವರಿ% ಮತ್ತು ಹಣದುಬ್ಬರದ% = 6% – 4% = 2% ಅಂದರೆ

ಸಕಾರಾತ್ಮಕ ಇಳುವರಿ.

**ಸನ್ನಿವೇಶ 2**

ಹಣವನ್ನು ಠೇವಣಿ ಮಾಡದೆ ಹಾಗೆ ನಗದಾಗಿ ಉಳಿಸಿಕೊಳ್ಳಲಾಗಿದೆ

ಸಲ್ಲಿಕೆಗಳು – 0%

ಹಣದುಬ್ಬರ – 4%

ಹಣ ಸಂದಾಯದ ನೈಜ ಪ್ರಮಾಣ:

ಪಾವತಿ % – ಹಣದುಬ್ಬರ % = 0% – 4% = –4% ಅಂದರೆ

ನಕಾರಾತ್ಮಕ ಗತಿಯಲ್ಲಿದೆ

ನಗದಾಗಿ ಉಳಿಸಿಕೊಂಡಿದ್ದ ಹಣ ಶೇಕಡ 4ರಷ್ಟು ಮೌಲ್ಯವನ್ನು ಕಳೆದುಕೊಂಡಿತು.

ಸೂಕ್ತವಾದ ಆರ್ಥಿಕ ಉತ್ಪನ್ನಗಳಲ್ಲಿ ಹಣವನ್ನು ತೊಡಗಿಸುವುದು ಎಷ್ಟು ಮಹತ್ವಪೂರ್ಣವೆಂಬುದನ್ನು ಮೇಲಿನ ಉದಾಹರಣೆಯಿಂದ ನೀವು ಅರ್ಥ ಮಾಡಿಕೊಳ್ಳಬಹುದು. ಹಣವನ್ನು ಸೂಕ್ತ ಮಾರ್ಗದಲ್ಲಿ ತೊಡಗಿಸುವುದರಿಂದ ನಾವು ತಕ್ಕ ಮಟ್ಟಿಗೆ ಹಣದುಬ್ಬರದಿಂದ ತಪ್ಪಿಸಿಕೊಳ್ಳಬಹುದು.

# ಸಂದೇಶ–4 { ಹಣದ ಕಾಲಮೌಲ್ಯ }

ಪ್ರಸ್ತುತ ನಮ್ಮ ಬಳಿಯಿರುವ ಹಣದ ಬೆಲೆಯು, ಬಡ್ಡಿಯ ದರವು ಸಕಾರಾತ್ಮಕವಾಗಿದ್ದಲ್ಲಿ ತನ್ನ ಗಳಿಕೆಯ ಸಾಮರ್ಥ್ಯದಿಂದಾಗಿ ಭವಿಷ್ಯದಲ್ಲಿನ ಅದೇ ಮೊತ್ತದ ಹಣದ ಬೆಲೆಗಿಂತ ಹೆಚ್ಚಾಗಿರುತ್ತದೆ ಎಂಬ ಪರಿಕಲ್ಪನೆಯನ್ನು ಹಣದ ಕಾಲಮೌಲ್ಯದ ಪರಿಕಲ್ಪನೆಯೆಂದು ಕರೆಯಲಾಗುತ್ತದೆ. ಇಂದಿನ ₹100, 2 ವರ್ಷಗಳ ನಂತರದ ₹100ಗಳಿಗೆ ಸಮನಾಗದೆ ಹೋಗಬಹುದು.



**10% ಬಡ್ಡಿದರದ ಪ್ರಮಾಣ/ರಿಯಾಯಿತಿಯನ್ನು ಕಲ್ಪಿಸಿಕೊಂಡು ಈ ಕೆಳಗಿನ ಸನ್ನಿವೇಶಗಳನ್ನು ಪರಿಗಣಿಸಿ**

10% ಬಡ್ಡಿಯ ಮೇಲೆ ಹೂಡಲಾದ ₹100ರ ಮೌಲ್ಯವು 2 ವರ್ಷಗಳಲ್ಲಿ ವಾರ್ಷಿಕ ಚಕ್ರಬಡ್ಡಿಯನ್ನೂ ಒಳಗೊಂಡು ₹121 ಗಳಾಗುತ್ತದೆ. ಪ್ರಸಕ್ತ ನಗದಿನ ಹರಿವನ್ನು ಪರಿಗಣಿಸಿ ಇದನ್ನು **ಭವಿಷ್ಯದ ಮೌಲ್ಯ**ವೆಂದು ಕರೆಯಲಾಗುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ ಅದೇ ಸನ್ನಿವೇಶದಲ್ಲಿ 2 ವರ್ಷಗಳ ನಂತರ ₹121 ಗಳನ್ನು ಹಿಂಪಡೆಯುವುದು ಇಂದಿನ ₹100 ಗಳಿಗೆ ಸಮನಾಗಿರುತ್ತದೆ. ಭವಿಷ್ಯದಲ್ಲಿನ ನಗದಿನ ಹರಿವನ್ನು ಆಧಾರವಾಗಿಟ್ಟುಕೊಂಡು ಇದನ್ನು **ಪ್ರಸಕ್ತ ಮೌಲ್ಯ**ವೆಂದು ಕರೆಯಲಾಗುತ್ತದೆ. ಭವಿಷ್ಯದಲ್ಲಿ 2 ವರ್ಷಗಳ ನಂತರ ಪಡೆದುಕೊಳ್ಳುವ ₹121 ಗಳ ಪ್ರಸಕ್ತ ಮೌಲ್ಯವು ಇಂದಿನ ₹100 ಗಳಾಗಿರುತ್ತದೆ.

ಹಣಕ್ಕೆ '**ಕಾಲ ಮೌಲ್ಯ**'ವಿದೆಯೆಂಬುದು ಇದರಿಂದ ನಮಗೆ ಕಂಡು ಬರುತ್ತದೆ.

**ನೆನಪಿಡಿ**

ಹಣವನ್ನು ಬುದ್ಧಿವಂತಿಕೆಯಿಂದ ಹೂಡದಿದ್ದಲ್ಲಿ ಅದು ಹಣದುಬ್ಬರದಿಂದಾಗಿ ತನ್ನ ಮೌಲ್ಯ ಕಳೆದುಕೊಳ್ಳಬಹುದು.

₹100ರ ಮೇಲೆ 5% ಆದಾಯ ಗಳಿಸುವಾಗ ಹಣದುಬ್ಬರದ ಪ್ರಮಾಣ 7% ಇದ್ದರೆ ನಿಜವಾದ ಆದಾಯ (-2%) ಆಗಿರುತ್ತದೆ! ಹಣವು ₹2 ರಷ್ಟು ಮೌಲ್ಯ ಕಳೆದುಕೊಳ್ಳುತ್ತದೆ. ಆದ್ದರಿಂದ ಹಣದುಬ್ಬರ ಮತ್ತು ಇನ್ನಿತರ ಅಂಶಗಳಿಗೆ ಪರಿಹಾರವಾಗಿ ಹಣಕಾಸು ಸಂಸ್ಥೆಗಳು ನೀವು ಠೇವಣಿ ಇಟ್ಟಾಗ ಬಡ್ಡಿ ನೀಡುತ್ತವೆ ಮತ್ತು ನೀವು ಸಾಲ ತೆಗೆದುಕೊಂಡಾಗ ಬಡ್ಡಿ ತೆಗೆದುಕೊಳ್ಳುತ್ತವೆ. ಆದ್ದರಿಂದ ಸೂಕ್ತವಾದ ಹಣಕಾಸು ಉತ್ಪನ್ನಗಳಲ್ಲಿ ಹಣವನ್ನು ತೊಡಗಿಸುವುದು ಅಗತ್ಯವಾಗುತ್ತದೆ. ಇದರಿಂದಾಗಿ ನಾವು ಹಣದುಬ್ಬರದ ಪ್ರಮಾಣಕ್ಕಿಂತ ಹೆಚ್ಚಿನ ಆದಾಯವನ್ನು ಗಳಿಸುವುದು ಮಾತ್ರವಲ್ಲದೆ ಹಣದ ಭವಿಷ್ಯ ಮೌಲ್ಯವನ್ನು ಸಹ ಕಾಪಾಡಿಕೊಳ್ಳಬಹುದು.



# ಸಂದೇಶ–5 { ಸಂಭಾವ್ಯ ನಷ್ಟ ಹಾಗೂ ಇಳುವರಿ }

ಯಾವುದೇ ಹೂಡಿಕೆಯಲ್ಲೂ ಕೆಲವೊಂದು ಸಂಭಾವ್ಯ ನಷ್ಟ ಇದ್ದೇ ಇರುತ್ತದೆ.

ಸಾಮಾನ್ಯವಾಗಿ ಸಂಭಾವ್ಯ ನಷ್ಟ ಹಾಗೂ ಇಳುವರಿಯ ನಡುವೆ ನೇರವಾದ ಸಂಬಂಧವಿರುತ್ತದೆ. ಇಳುವರಿಯ ಮಟ್ಟವು ಹೆಚ್ಚಿದ್ದ ಪಕ್ಷದಲ್ಲಿ ಸಂಭಾವ್ಯ ನಷ್ಟದ ಮಟ್ಟವು ಹೆಚ್ಚಿರುತ್ತದೆ. (ಇದು ಪ್ರಾರಂಭದಲ್ಲಿ ಹೂಡಿದ ಮೊತ್ತವನ್ನು ಕಳೆದುಕೊಳ್ಳುವ ಸಾಧ್ಯತೆಯನ್ನೂ ಒಳಗೊಂಡಿರುತ್ತದೆ.)

---

**ಇಳುವರಿಯು ಕಡಿಮೆಯಿದ್ದಲ್ಲಿ ಸಂಭಾವ್ಯ ನಷ್ಟವೂ ಕಡಿಮೆಯಿರುತ್ತದೆ**

---







ಹಣಕಾಸಿನ ಉತ್ಪನ್ನಗಳ ಮೇಲೆ ಹೂಡುವಾಗ ಮೂಲ ಹೂಡುವಿಕೆಯ ತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡಿರಬೇಕು. ಅದೆಂದರೆ ಸಂಭಾವ್ಯ ನಷ್ಟ ಹಾಗೂ ಇಳುವರಿಯ ನಡುವಣ ಸಮತೋಲನ.

ನಿರೀಕ್ಷಿತ ಹೆಚ್ಚಿನ ಇಳುವರಿಯು ಹೆಚ್ಚಿನ ಸಂಭಾವ್ಯ ನಷ್ಟದ ಸಾಧ್ಯತೆಗಳನ್ನು ಹೊಂದಿರುತ್ತದೆ.



## ನಿಮ್ಮ ಹಣವನ್ನು ಬುದ್ಧಿವಂತಿಕೆಯಿಂದ ಹೂಡಿರಿ !

ಎಚ್ಚರಿಕೆ! ಹೆಚ್ಚಿನ ಹಾಗೂ ಶೀಘ್ರ ಇಳುವರಿಯ ಯೋಜನೆಗಳಲ್ಲಿ ನಷ್ಟ ಸಂಭವಿಸಬಹುದು. ಆದ್ದರಿಂದ ಬರಬಹುದಾದ ನಷ್ಟವನ್ನು ಅರ್ಥಮಾಡಿಕೊಳ್ಳದೆ ಇಂತಹ ಇಳುವರಿಯನ್ನು ಬೆನ್ನಟ್ಟಬೇಡಿ.


ಯೋಜನೆಯನ್ನು ಮುಂದಿಡುತ್ತಿರುವ ಸಂಸ್ಥೆಯ ಅಥವ ವ್ಯಕ್ತಿಯ ಕಾರ್ಯಕ್ಷಮತೆ ಮತ್ತು ಹಿನ್ನಲೆಗಳನ್ನು ಸಂಪೂರ್ಣವಾಗಿ ಪರೀಕ್ಷಿಸಬೇಕು. ಅದರಲ್ಲಿರುವ ನಿಬಂಧನೆಗಳನ್ನು ಕೂಲಂಕಷವಾಗಿ ಪರಿಶೀಲಿಸಬೇಕು.

ನೀವು ಅಪರಿಚಿತ ಸಂಸ್ಥೆಗಳ ಅಥವ ವ್ಯಕ್ತಿಗಳ (ನಂಬಲಿಕ್ಕೆ ಕಷ್ಟ ಎನ್ನುವಂಥ) ಪ್ರಲೋಭನೆಗಳಿಗೆ ಒಳಗಾಗುವ ಮೊದಲೇ ಆಳವಾದ ಅಧ್ಯಯನ ಮಾಡಿ ಎಚ್ಚರವಹಿಸಿ !!!

**ಯಾವುದೇ ಯೋಜನೆಯ ಹೆಸರಿನಲ್ಲಿ ನಿಮ್ಮಿಂದ ಠೇವಣಿ ಪಡೆದುಕೊಂಡು ಅದನ್ನು ಹಿಂದಿರುಗಿಸದಿದ್ದಲ್ಲಿ ಅಂತಹ ಸಂಸ್ಥೆ ಅಥವ ವ್ಯಕ್ತಿಯ ವಿರುದ್ಧ ದೂರು ಅಥವ ಮಾಹಿತಿ ನೀಡಲು www.sachet.rbi.org.in ಸಂಪರ್ಕಿಸಿ**


# ಸಂದೇಶ–6 { ವೈವಿಧ್ಯತೆ }

**ಈ ಅತ್ಯಂತ ಪ್ರಾಚೀನ ಹೇಳಿಕೆ ನಮಗೆಲ್ಲರಿಗೂ ತಿಳಿದಿದೆ.**



**ನಿಮ್ಮ ಮೊಟ್ಟೆಗಳೆಲ್ಲವನ್ನು ಒಂದೇ ಬುಟ್ಟಿಯಲ್ಲಿಡಬೇಡಿ**

ಬೇರೆ ಬೇರೆ ಆಸ್ತಿಗಳಲ್ಲಿ ನಿಮ್ಮ ಹಣವನ್ನು ಹೂಡುವುದನ್ನು ವೈವಿಧ್ಯತೆಯ ಪ್ರಕ್ರಿಯೆಯೆಂದು ಕರೆಯಲಾಗುತ್ತದೆ.




## ವೈವಿಧ್ಯತೆ ಏಕೆ

ಯಾವುದೇ ಒಂದು ಅಥವಾ ಹೆಚ್ಚಿನ ಆಸ್ತಿಗಳ ಮೌಲ್ಯವು ಕಡಿಮೆ ಆಗುವ ಸಾಧ್ಯತೆಯಿರುವುದರಿಂದ ಅದರಿಂದ ಉಂಟಾಗುವ ನಷ್ಟದಿಂದ ರಕ್ಷಿಸಿಕೊಳ್ಳಲು ಬೇರೆ ಬೇರೆ ಆಸ್ತಿಗಳಲ್ಲಿ ವಿವಿಧೆಡೆಗಳಲ್ಲಿ ಹಣವನ್ನು ಹೂಡಬೇಕಾಗುತ್ತದೆ. ಎಲ್ಲಾ ಆಸ್ತಿಗಳ ಮೇಲಿನ ವರಮಾನಗಳು ಒಂದೇ ಸಮಯದಲ್ಲಿ ಬೀಳುವ ಸಾಧ್ಯತೆ ಕಡಿಮೆಯಿರುವುದರಿಂದ ಒಂದು ಆಸ್ತಿಯ ಮೇಲಿನ ಬೆಲೆ ಕಡಿಮೆಯಾದರೆ ಮತ್ತೊಂದರ ಬೆಲೆ ಹೆಚ್ಚಾಗಬಹುದು. ಆದ್ದರಿಂದ ಅದು ಹೂಡಿಕೆದಾರನೊಬ್ಬನ ನಷ್ಟಕ್ಕೆ ಪರಿಹಾರವಾಗಿ ಒದಗಬಹುದು.

ಹಣಕಾಸು ಅರಿವಿನ ಸಂದೇಶಗಳು (ಫೇಮ್)

# ಮೂಲ ಬ್ಯಾಂಕಿಂಗ್




ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ಇಲಾಖೆ
ಭಾರತೀಯ ರಿಸರ್ವ್ ಬ್ಯಾಂಕ್, ಆರ್.ಬಿ.ಐ

ಸಂದೇಶ-7

# ಆಯವ್ಯಯ , ಉಳಿತಾಯ ಮತ್ತು ಜವಾಬ್ದಾರಿಯುತ ಸಾಲ

## ಆಯವ್ಯಯ



### ಆಯವ್ಯಯ ಎಂದರೇನು?

ಸರಳವಾಗಿ ಹೇಳುವುದಾದರೆ ಅದು ನಿಮ್ಮ ಭವಿಷ್ಯದ ವರಮಾನ ಮತ್ತು ವೆಚ್ಚಗಳ ಯೋಜನೆ. ಆಯವ್ಯಯ ಲೆಕ್ಕವನ್ನು ವರ್ಷಕ್ಕೊಮ್ಮೆ ತಿಂಗಳಿಗೊಮ್ಮೆ ಅಥವಾ ವಾರಕ್ಕೊಮ್ಮೆ ಸಹ ಮಾಡಬಹುದು.

### ಆಯವ್ಯಯ ಯೋಜನೆಯನ್ನೇಕೆ ಸಿದ್ಧಪಡಿಸಬೇಕು?

ನಿಮ್ಮ ಆಯವ್ಯಯದ ಪಟ್ಟಿ ನಿಮ್ಮಲ್ಲಿದ್ದರೆ ನೀವು ನಿಮ್ಮ ಖರ್ಚಿನ ಮೇಲೆ ಹಿಡಿತ ಸಾಧಿಸಿ ಹಣವನ್ನು ಉಳಿಸಬಹುದು. ಆಯವ್ಯಯದೊಂದಿಗೆ ನಿಮ್ಮ ವಾಸ್ತವಿಕ ವೆಚ್ಚವನ್ನು ಹೋಲಿಸಿ ನೋಡಿದಾಗ ನೀವು ಎಲ್ಲಿ ಹೆಚ್ಚು ವೆಚ್ಚ ಮಾಡಿದಿರೆಂಬುದು ತಿಳಿದು ಬರುತ್ತದೆ (ಅದು ಕಡಿಮೆಯೂ ಆಗಿರಬಹುದು)

ನಿಮ್ಮ ಹಣಕಾಸಿನ ಯೋಜನೆಯನ್ನು ಮಾಡುವಲ್ಲಿ ಸಹಾಯ ಮಾಡುವುದು ಆಯವ್ಯಯ ಪತ್ರದ ಅಂತಿಮ ಗುರಿಯಾಗಿದೆ

# ಉಳಿತಾಯ



## ಉಳಿತಾಯವೆಂದರೇನು?

ಈ ಕೆಳಗಿನ ಧೋರಣೆಯಂತೆ ಉಳಿತಾಯವನ್ನು ನೋಡುವುದು ಒಳ್ಳೆಯದು.

**ಉಳಿತಾಯ = ಆದಾಯ – ಖರ್ಚು** ✗

**ಖರ್ಚು = ಆದಾಯ – ಉಳಿತಾಯ** ✓

> ನೀವು ಯಾವುದೇ ಖರ್ಚು ಮಾಡುವ **ಮೊದಲು** ನಿಮ್ಮ ಆದಾಯದ ಒಂದು ಭಾಗವನ್ನು ತೆಗೆದಿಡಿ

## ಉಳಿತಾಯವನ್ನು ಎಲ್ಲಿ ಮಾಡಬೇಕು?

ಉಳಿತಾಯ ಮಾಡುವಾಗ ಈ ಮೂರು ಮಹತ್ವಪೂರ್ಣ ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು ಅವುಗಳೆಂದರೆ **ಸುರಕ್ಷತೆ, ದ್ರವ್ಯತೆ** ಮತ್ತು **ಬರಬಹುದಾದ ವರಮಾನ.** ನಿಮ್ಮ ಮೂಲಧನ ಅಥವಾ ಒಂದು ನಿರ್ದಿಷ್ಟ ಆಸ್ತಿಯ ಮೇಲಿನ ಹೂಡಿಕೆ ಹಿಂದಿರುಗಿ ಬರುವುದರ ಖಚಿತತೆಯ ಮೇಲೆ **ಸುರಕ್ಷತೆ**ಯು ಅವಲಂಬಿತವಾಗಿರುತ್ತದೆ. ಸರ್ಕಾರಿ ಬಾಂಡುಗಳು ಅತ್ಯಂತ ಸುರಕ್ಷಿತವೆಂದು ಹೇಳಬಹುದು. ಬ್ಯಾಂಕ್‌ಗಳ ಸ್ಥಿರ ಠೇವಣಿಗಳೂ ಇತರ ಉಳಿತಾಯಗಳಿಗೆ ಹೋಲಿಸಿದಾಗ ಸುರಕ್ಷಿತವೆಂದು ಹೇಳಬಹುದು.

ಒಂದು ಆಸ್ತಿಯನ್ನು ಅತ್ಯಂತ ಕನಿಷ್ಠ ಮೌಲ್ಯದ ನಷ್ಟದೊಂದಿಗೆ ಎಷ್ಟು ಸುಲಭವಾಗಿ ಮಾರಬಹುದೆಂಬುದರ ಮೇಲೆ ಅದರ **ದ್ರವ್ಯತೆ** ಅವಲಂಬಿತವಾಗಿರುತ್ತದೆ. ಬ್ಯಾಂಕ್ ಠೇವಣಿಗಳು, ಪಟ್ಟಿ ಮಾಡಲ್ಪಟ್ಟ ಮತ್ತು ಮಾರಾಟಕ್ಕೊಳಪಟ್ಟ ಈಕ್ವಿಟಿ ಶೇರ್ ಮತ್ತು ಮ್ಯೂಚುಯಲ್ ಫಂಡ್ (Mutual Funds) ಇವುಗಳು ಹೆಚ್ಚು ದ್ರವ್ಯತೆಯನ್ನು ಹೊಂದಿರುತ್ತವೆ. ಹಣಕಾಸು ಉತ್ಪನ್ನದ ಗುಣ, ಮಾದರಿ ಹಾಗು ಅದರಲ್ಲಿ ಅಡಕವಾಗಿರುವ ನಷ್ಟದ ಸಂಭವನೀಯತೆ ಇವುಗಳ ಆಧಾರದ ಮೇಲೆ ಇಳುವರಿಯು ಅವಲಂಬಿತವಾಗಿರುತ್ತದೆ. ಈಕ್ವಿಟಿ ಶೇರುಗಳು ನಿಮಗೆ ಹೆಚ್ಚಿನ ಆದಾಯವನ್ನು ನೀಡಿದರೂ ಸಹ ಅದರಲ್ಲಿ ನಷ್ಟದ ಸಂಭವವು ಹೆಚ್ಚಾಗಿರುತ್ತದೆ.

**ಉಳಿತಾಯ ಮಾಡುವಾಗ ಗಮನದಲ್ಲಿಡಬೇಕಾದ ಅಂಶಗಳು**

- ನಿಮ್ಮ ಉಳಿತಾಯಗಳು ವಿವಿಧೆಡೆಗಳಲ್ಲಿರುವಂತೆ ನೋಡಿಕೊಳ್ಳಬೇಕು (ಈ ಹಿಂದೆ ಉಲ್ಲೇಖಿಸಿದ ವೈವಿಧ್ಯತೆಗಳ ಮೇಲಿನ ಸಂದೇಶವನ್ನು ಗಮನಿಸಿ)
- ಉಳಿತಾಯದ ಕೆಲವು ಭಾಗವು ಅಗತ್ಯವಿದ್ದಾಗ ಹಣವನ್ನು ಹಿಂಪಡೆಯುವಂತಿರಬೇಕು
- ಅತ್ಯಂತ ನಷ್ಟದ ಸಂಭವವಿರುವ,ಅನಿಯಂತ್ರಿತ ಆಸ್ತಿಗಳಲ್ಲಿ ನಿಮ್ಮ ಹಣವನ್ನು ಹೂಡಬೇಡಿ. ನೀವು ಎಲ್ಲವನ್ನೂ ಕಳೆದುಕೊಳ್ಳಬಹುದು !!

# ಜವಾಬ್ದಾರಿಯುತ ಸಾಲ

ಮೌಲ್ಯವನ್ನು ಸೃಷ್ಟಿ ಮಾಡುವ ಹಾಗು ಇಳುವರಿಯನ್ನು ಉತ್ಪತ್ತಿ ಮಾಡುವ ಆಸ್ತಿಗಳಲ್ಲಿ ಹೂಡಲು ಮಾತ್ರ ಎರವಲು ಪಡೆಯಬೇಕು. ಸಾಲ ತರುವ ಉತ್ತಮ ಉದಾಹರಣೆಗಳೆಂದರೆ ಮನೆಯನ್ನು ಕೊಳ್ಳಲು ಸ್ಥಿರಾಸ್ತಿ ಸಾಲ ಪಡೆಯುವುದು, ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಶೈಕ್ಷಣಿಕ ಸಾಲ ಪಡೆಯುವುದು ಇತ್ಯಾದಿ.



ಆಸ್ತಿಯ ಮೇಲಿನ ಹೂಡಿಕೆ ✓



ಶೈಕ್ಷಣಿಕ ನಿಧಿಗಾಗಿ ✓



ವೈಯ್ಯಕ್ತಿಕ ಖರ್ಚಿಗಾಗಿ ✗



ಬೇಜವಾಬ್ದಾರಿಯಿಂದ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸುವುದು ✗

## ಯಾರಿಂದ ಸಾಲ ತರಬೇಕು?

ಎನ್.ಬಿ.ಎಫ್.ಸಿ. , ಎಚ್.ಎಫ್.ಸಿ ಮತ್ತು ಬ್ಯಾಂಕ್‌ಗಳಂತಹ ನಿಯಂತ್ರಿತ ಸಂಸ್ಥೆಗಳಿಂದ ಸಾಲ ತರುವುದು ಒಳ್ಳೆಯ ಅಭ್ಯಾಸ. ಅವುಗಳ ಮೇಲೆ ನಿಯತವಾದ ಮೇಲ್ವಿಚಾರಣೆಯಿರುತ್ತದೆ ಮತ್ತು ಅವು ಹೆಚ್ಚು ಪಾರದರ್ಶಕವಾಗಿರುತ್ತವೆ ಇತರೆ ಲೇವಾದೇವಿ ವ್ಯವಹಾರಸ್ತರಂತೆ ಈ ಸಂಸ್ಥೆಗಳು ಹೆಚ್ಚು ಶುಲ್ಕ ವಿಧಿಸುವುದಿಲ್ಲ. ಅವುಗಳ ಸೇವೆಯಲ್ಲೇನಾದರೂ ಕೊರತೆಯಿದ್ದಲ್ಲಿ ಅಥವಾ ನಿಯಂತ್ರಣಗಳ ಅನುಸರಿಸುವಿಕೆ ಇಲ್ಲದಿದ್ದಲ್ಲಿ ಅದರ ಪರಿಹಾರಕ್ಕಾಗಿ ಆಂತರಿಕವಾಗಿಯೂ ಮತ್ತು ನಿಯಂತ್ರಕರಿಂದಲೂ ಉಚಿತ ಸೇವೆಯ ಸೌಲಭ್ಯವಿರುತ್ತದೆ.

## ಸಾಲ ಕೊಡಿಸುವ ಹೆಸರಿನಲ್ಲಿ ನಿಮ್ಮನ್ನು ವಂಚಿಸುವ ಸಾಧ್ಯತೆಯಿರುತ್ತದೆ

ಸಾಲ ಕೊಡಿಸಲು ಹಣ ಪಡೆದು ನಿಮಗೆ ಸಹಾಯ ಮಾಡಲು ಬರುವ ಏಜೆಂಟರ ಬಗ್ಗೆ ಎಚ್ಚರವಹಿಸಿ ಬ್ಯಾಂಕುಗಳು ಮತ್ತು ಎನ್.ಬಿ.ಎಫ್.ಸಿ. . ಎಚ್.ಎಫ್.ಸಿ ಅಥವ ವ್ಯವಹಾರ ಪ್ರತಿನಿಧಿಗಳೊಂದಿಗೆ ನೇರವಾಗಿ ವ್ಯವಹರಿಸಿ.

# ಸಂದೇಶ-8 { ಠೇವಣಿ ಖಾತೆಗಳು }

## ಜಡ ಮತ್ತು ಸಕ್ರಿಯ ಉಳಿತಾಯಗಳು.

ಉಳಿತಾಯ ಖಾತೆಗಳ ಮೇಲಿನ ಬಡ್ಡಿದರ ಪ್ರಮಾಣವು ಬಹಳ ಕಡಿಮೆಯಿರುತ್ತದೆ. ಆದ್ದರಿಂದ ಇದನ್ನು ಜಡ ಉಳಿತಾಯವೆಂದು ಕರೆಯಲಾಗುತ್ತದೆ. ನಿಯತವಾದ ಉಳಿತಾಯ ಖಾತೆಗಳಲ್ಲಿ ಹೆಚ್ಚು ಹಣವನ್ನು ಇಡಬೇಡಿ !



ಅದರ ಬದಲಾಗಿ ಬ್ಯಾಂಕ್‌ಗಳ ಆವರ್ತಕ/ಸ್ಥಿರ ಠೇವಣಿಗಳಲ್ಲಿ ನಿಮ್ಮ ಹಣವನ್ನು ಹೂಡಿ. ಅದು ನಿಮಗೆ ಹೆಚ್ಚಿನ ಆದಾಯವನ್ನು ತರುತ್ತದೆ

**ಇನ್ನಿತರ ಒಳ್ಳೆಯ ಅಭ್ಯಾಸಗಳು :**

- ಲೆಕ್ಕದ ಹೇಳಿಕೆ ಅಥವಾ ಪಾಸ್ ಪುಸ್ತಕವನ್ನು ನಿಯತವಾಗಿ ಅವಲೋಕಿಸಿ ಅದರಲ್ಲಿರುವ ಪ್ರವೇಶಿಕೆಗಳನ್ನು ಪರಿಶೀಲಿಸುವುದು.
- ಚೆಕ್ ಪುಸ್ತಕವನ್ನು ತೆಗೆದುಕೊಂಡಿದ್ದ ಪಕ್ಷದಲ್ಲಿ ಅದನ್ನು ಸುರಕ್ಷಿತ ಸ್ಥಳದಲ್ಲಿರಿಸುವುದು
- ಅಂತರ್ಜಾಲ ಬ್ಯಾಂಕಿಂಗ್ ಗುರುತು ಮತ್ತು ಪಾಸ್‌ವರ್ಡ್ ಅನ್ನು ಯಾರೊಂದಿಗೂ ಹಂಚಿಕೊಳ್ಳಬಾರದು.
- ಅದೇ ರೀತಿ ಡೆಬಿಟ್ ಕಾರ್ಡ್ ಪಡೆದುಕೊಂಡಿದ್ದಲ್ಲಿ ಅದರ ಪಿನ್ ಸಂಖ್ಯೆಯನ್ನು ಯಾರೊಂದಿಗೂ ಹಂಚಿಕೊಳ್ಳಬಾರದು
- ಅಂತರ್ಜಾಲ ವ್ಯವಹಾರಗಳ OTP (ಒಂದು ನಿರ್ದಿಷ್ಟ ಸಮಯದಲ್ಲಿ ನೀಡಲಾದ ಪಾಸ್‌ವರ್ಡ್)ಗಳನ್ನು ಸಹ ಯಾರೊಂದಿಗೂ ಹಂಚಿಕೊಳ್ಳಬಾರದು

### ನಾಮನಿರ್ದೇಶನ ಎಂದರೇನು ಮತ್ತು ಏಕೆ ನಾಮನಿರ್ದೇಶನ ಮಾಡಬೇಕು ?

ನಿಯುಕ್ತ (nominee) ವ್ಯಕ್ತಿಯೆಂದರೆ ಅವರು ಮೃತಪಟ್ಟ ವ್ಯಕ್ತಿಯ ಕಾನೂನಾತ್ಮಕ ವಾರಸುದಾರರಂತೆ ಬ್ಯಾಂಕ್ ನಲ್ಲಿರುವ ಅವರ ಹಣವನ್ನು ಹಿಂಪಡೆಯಬಹುದು. ಮೃತ ವ್ಯಕ್ತಿಯ ಠೇವಣಿಯು ವ್ಯಕ್ತಿಗತ ಲೆಕ್ಕದಲ್ಲಿದ್ದರೆ ಅದನ್ನು ನಿಯುಕ್ತರು ಹಿಂತೆಗೆದುಕೊಳ್ಳಬಹುದು ಅಥವಾ ಅದು ಹಲವಾರು ವ್ಯಕ್ತಿಗಳ ಜಂಟಿ ಠೇವಣಿಯಾಗಿದ್ದಲ್ಲಿ ಅವರೆಲ್ಲರೂ ಮೃತರಾದರೆ ನಿಯುಕ್ತರು ಆ ಹಣವನ್ನು ಸಹ ಹಿಂತೆಗೆದುಕೊಳ್ಳಬಹುದು. ನೇಮಕಾತಿಯು ಉಳಿದ ಕುಟುಂಬಸ್ಥರ ಕಷ್ಟವನ್ನು ತಗ್ಗಿಸುವುದು ಮಾತ್ರವಲ್ಲದೆ ಕ್ಷಿಪ್ರ ಇತ್ಯರ್ಥಕ್ಕೆ ನೆರವಾಗುತ್ತದೆ.

"ನೀವು ಠೇವಣಿ ಖಾತೆ ತೆರೆಯುವಾಗ ಯಾವಾಗಲೂ ನಾಮ ನಿರ್ದೇಶನ ಅರ್ಜಿಯನ್ನು ಭರ್ತಿಮಾಡಿ"

### ಅವಧಿಪೂರ್ವ ಹಿಂಪಡೆಯುವಿಕೆ:

ಸ್ಥಿರ ಠೇವಣಿಗಳು ಸಾಧಾರಣವಾಗಿ ಒಂದು ನಿರ್ದಿಷ್ಟ ಕಾಲಾವಧಿಗಾಗಿ ಮಾಡಲ್ಪಟ್ಟಿರುತ್ತವೆ. ಆ ಕಾಲಾವಧಿಗೆ ಮೊದಲು ನೀವು ಹಣವನ್ನು ಹಿಂಪಡೆದರೆ ಬ್ಯಾಂಕ್ ಅವಧಿಪೂರ್ವ ಹಿಂಪಡೆಯುವಿಕೆಗಾಗಿ ನಿಮಗೆ ದಂಡ ವಿಧಿಸುತ್ತದೆ.



**ಠೇವಣಿದಾರನ ಸಾವಿನ ಸಂದರ್ಭದಲ್ಲಿ ಅವಧಿಪೂರ್ವ ಹಿಂಪಡೆಯುವಿಕೆಯ ಮೇಲೆ ಯಾವುದೇ ದಂಡವನ್ನು ಹಾಕುವುದಿಲ್ಲ**

# ಸಂದೇಶ–9 { ಋಣಾಂಕ }

## ನಿರ್ದಿಷ್ಟವಾಗಿ ಋಣಾಂಕವೆಂದರೇನು?

- ಸಾಲದ ಅಂಕ (ಒಂದು ಮೂರು ಅಂಕಿಗಳ ಸಂಖ್ಯೆ) ಸಾಲ ಪಡೆಯುವವನ ಸಾಲ ವಿಶ್ವಾಸಾರ್ಹತೆಯನ್ನು ಸೂಚಿಸುತ್ತದೆ. ಅದು ಅವನ/ಅವಳ ಸಾಲದ ಪೂರ್ವಮಾಹಿತಿ ಮತ್ತು ಇನ್ನಿತರ ಅಂಶಗಳ ಮೇಲೆ ಆಧಾರಿತವಾಗಿರುತ್ತದೆ
- ಸಾಲ ಮಾಹಿತಿ ಕಂಪನಿಯು ನೀಡುವ ಸಾಲ ಮಾಹಿತಿ ವರದಿಯೊಂದಿಗೆ ಇದನ್ನು ಕೊಡಲಾಗುತ್ತದೆ.
- ಬ್ಯಾಂಕ್‌ಗಳಿಂದ ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ಪಡೆದಿರುವ ಸಾಲವನ್ನು ಓರ್ವ ಸಾಲಗಾರನು ಸರಿಯಾದ ಸಮಯದಲ್ಲಿ ಹಿಂದಿರುಗಿಸಿದ್ದ ಪಕ್ಷದಲ್ಲಿ ಅವನ ಸಾಲದ ಅಂಕ ಹೆಚ್ಚಾಗಿರುತ್ತದೆ.




ಅಂಕಗಳು ಹೆಚ್ಚಾಗಿದ್ದಲ್ಲಿ ಸಾಲದ ವಿಶ್ವಾಸಾರ್ಹತೆ ಹೆಚ್ಚಾಗಿರುತ್ತದೆ. ಅಂತಹವರು ಜವಾಬ್ದಾರಿಯುತ ಸಾಲಗಾರರಾಗುತ್ತಾರೆ.

## ಋಣಾಂಕ ಏಕೆ ಮಹತ್ವ ಪಡೆದಿದೆ?

- ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳು ನಿಮ್ಮ ಋಣಾಂಕ ಮತ್ತು ಸಾಲದ ಇತಿಹಾಸವನ್ನು ಇನ್ನಿತರ ಅಂಶಗಳೊಂದಿಗೆ ಪರಿಶೀಲಿಸಿದನಂತರ ನಿಮಗೆ ಸಾಲವನ್ನು ಮಂಜೂರು ಮಾಡುತ್ತವೆ.
- ಉಳಿದೆಲ್ಲಾ ವಿಷಯಗಳು ಏಕಪ್ರಕಾರವಾಗಿದ್ದರೂ ಉನ್ನತ ಋಣಾಂಕಗಳನ್ನು ಹೊಂದಿರುವವರು ಕಡಿಮೆ ಬಡ್ಡಿದರ ಪ್ರಮಾಣದಲ್ಲಿ ಎರವಲು ಪಡೆಯುತ್ತಾರೆ.



**ಆದ್ದರಿಂದ ಪ್ರಶ್ನೆಯೇನೆಂದರೆ ನೀವು ಹೇಗೆ ನಿಮ್ಮ ಋಣಾಂಕವನ್ನು ಉತ್ತಮ ಪಡಿಸಿಕೊಳ್ಳಬಹುದು?**

- ನಿಮ್ಮ ಸಾಮರ್ಥ್ಯದ ಮಿತಿಗನುಗುಣವಾಗಿ ಮಾತ್ರ ಸಾಲ ಪಡೆಯಿರಿ ಅಂದರೆ ನಿಮಗೆ ಕಾಲಕ್ಕೆ ಸರಿಯಾಗಿ, ನಿಯತವಾಗಿ ಹಿಂತಿರುಗಿಸುವ ಸಾಮರ್ಥ್ಯವಿರಬೇಕು.
- ನೀವು ನಿಮ್ಮ ಸಾಲದ ಯಾವುದೇ ಕಂತನ್ನು ತಪ್ಪಿಸುವುದಿಲ್ಲವೆಂಬುದನ್ನು ಖಚಿತ ಪಡಿಸಿಕೊಳ್ಳಿ.
- ನಿಮಗೆ ಸಾಧ್ಯವಿದ್ದಲ್ಲಿ ಅವಧಿಗೆ ಮುನ್ನವೇ ಸಾಲವನ್ನು ಹಿಂತಿರುಗಿಸಿ, ಅದರಿಂದ ನಿಮ್ಮ ಸಾಲದ ಪೂರ್ವಮಾಹಿತಿಯನ್ನು ಉತ್ತಮ ಪಡಿಸುತ್ತದೆ.

# ಸಂದೇಶ–10 ಹೊಸ ವರ್ಗದ ಬ್ಯಾಂಕುಗಳು ಮತ್ತು ವ್ಯವಹಾರ ಪ್ರತಿನಿಧಿಗಳು

ಇತ್ತೀಚಿನ ವರ್ಷಗಳಲ್ಲಿ ಸಾಂಪ್ರದಾಯಿಕ ಬ್ಯಾಂಕುಗಳು ಮಾತ್ರವಲ್ಲದೆ ಹಲವಾರು ಹೊಸ ವರ್ಗದ ಬ್ಯಾಂಕುಗಳು ಅಸ್ತಿತ್ವಕ್ಕೆ ಬಂದಿವೆ. ಅವುಗಳೆಂದರೆ ಪಾವತಿ ಬ್ಯಾಂಕುಗಳು ಮತ್ತು ಸಣ್ಣ ಹಣಕಾಸು ಬ್ಯಾಂಕುಗಳು. ಈ ಎರಡು ರೀತಿಯ ಬ್ಯಾಂಕುಗಳನ್ನು ಸ್ಥಾಪಿಸುವ ಪ್ರಮುಖ ಉದ್ದೇಶವೆಂದರೆ ಅವುಗಳ ಮೂಲಕ ಹೆಚ್ಚಿನ ಹಣಕಾಸು ಸೇರ್ಪಡೆಯನ್ನು ಉತ್ತೇಜಿಸುವುದಾಗಿದೆ. ಮುಂದುವರೆದ ತಂತ್ರಜ್ಞಾನ ಪರಿಸರದಲ್ಲಿ ಇದನ್ನು ಮಾಡಲಾಗುತ್ತದೆ.

## ಪಾವತಿ ಬ್ಯಾಂಕುಗಳು :

- ಬೇಡಿಕೆ ಠೇವಣಿಗಳನ್ನು ಗ್ರಾಹಕನೊಬ್ಬನಿಂದ ₹1 ಲಕ್ಷದ ವರೆಗೆ ಸ್ವೀಕರಿಸಲಾಗುತ್ತದೆ. ಆದರೆ ಆವರ್ತನ/ಸ್ಥಿರ ಠೇವಣಿಗಳನ್ನು ಸ್ವೀಕರಿಸಲಾಗುವುದಿಲ್ಲ.
- ಎಟಿಎಂ/ಡೆಬಿಟ್ ಕಾರ್ಡ್‌ಗಳನ್ನು ನೀಡಬಹುದೇ ಹೊರತು ಕ್ರೆಡಿಟ್ ಕಾರ್ಡ್‌ಗಳನ್ನಲ್ಲ.
- ಯಾವುದೇ ಸಾಲವನ್ನಾಗಲಿ ಅಥವ ಮುಂಗಡ ಹಣವನ್ನಾಗಲಿ ನೀಡುವುದಿಲ್ಲ.




ಅವು ಹಲವಾರು ಮಾರ್ಗಗಳ ಮೂಲಕ ಪಾವತಿ ಮತ್ತು ರವಾನೆ ಸೇವೆಗಳನ್ನು ಸಹ ಒದಗಿಸಬಹುದು ಮತ್ತು ಮ್ಯೂಚುಯಲ್ ಫಂಡ್‌ಗಳನ್ನು ಹಾಗು ವಿಮೆ ಉತ್ಪನ್ನಗಳನ್ನು ವಿತರಿಸಬಹುದು.

## ಸಣ್ಣ ಹಣಕಾಸು ಬ್ಯಾಂಕುಗಳು

ಸಣ್ಣ ಹಣಕಾಸು ಬ್ಯಾಂಕುಗಳು ಪ್ರಾಥಮಿಕವಾಗಿ ಕೆಳವರ್ಗದ ಸೇವಾ ವಂಚಿತ ಜನರಿಗೆ ಸಣ್ಣ ಮಟ್ಟ ಸಾಲಗಳನ್ನು (ರೂ 25 ಲಕ್ಷಗಳವರೆಗೆ) ನೀಡುತ್ತವೆ ಹಾಗೂ ಸಣ್ಣ ವ್ಯಾಪಾರ ಘಟಕಗಳಿಗೆ ಅತಿ ಸಣ್ಣ ಮತ್ತು ಸಣ್ಣ ಉದ್ದಿಮೆಗಳಿಗೆ ಮತ್ತು ಸಣ್ಣ ಹಾಗೂ ಮಧ್ಯಮ ರೈತರಿಗೆ. ಅಸಂಘಟಿತ ಕ್ಷೇತ್ರದಲ್ಲಿರುವವರಿಗೆ ಉನ್ನತ ತಂತ್ರಜ್ಞಾನದ ಕಡಿಮೆ ಖರ್ಚಿನ ಸೇವೆಗಳನ್ನು ಒದಗಿಸುತ್ತವೆ .

- ಸಣ್ಣ ವ್ಯಾಪಾರ ಘಟಕಗಳು
- ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳು
- ಸಣ್ಣ ಹಾಗೂ ಅಂಚಿನಲ್ಲಿರುವ ರೈತರು
- ಅಸಂಘಟಿತ ಕ್ಷೇತ್ರದಲ್ಲಿರುವ ಉದ್ದಿಮೆಗಳು

# ವ್ಯವಹಾರ ಪ್ರತಿನಿಧಿಗಳು (ಬಿಸಿನೆಸ್ ಕರೆಸ್ಪಾಂಡೆಂಟ್ಸ್)

ವ್ಯವಹಾರ ಪ್ರತಿನಿಧಿಯು (ಅಥವ ಏಜೆಂಟ್) ಒಂದು ಬ್ಯಾಂಕನ್ನು ಪ್ರತಿನಿಧಿಸುತ್ತಾನೆ. ಅವನು ಸಾಮಾನ್ಯವಾಗಿ ಬ್ಯಾಂಕಿನಿಂದ ದೂರದಲ್ಲಿರುವ ಗ್ರಾಹಕರ ಬಳಿ ಹೋಗಿ (ದೂರದ ಹಳ್ಳಿಗಳು) ಅವರ ಬ್ಯಾಂಕಿಂಗ್ ಅಗತ್ಯತೆಗಳಲ್ಲಿ/ವ್ಯವಹಾರಗಳಲ್ಲಿ ಸಹಾಯ ಮಾಡುತ್ತಾನೆ.



**ಒಬ್ಬ ವ್ಯವಹಾರ ಪ್ರತಿನಿಧಿಯು ಈ ಕೆಳಗಿನ ಸೇವೆಗಳನ್ನು ಒದಗಿಸುತ್ತಾನೆ :**

- ಬ್ಯಾಂಕ್ ಖಾತೆ ತೆರೆಯುವುದು.
- ಹಣದ ಠೇವಣಿ ಇಡುವುದು ಮತ್ತು ಹಿಂಪಡೆಯುವುದು.
- ನಿಮ್ಮ ಖಾತೆಯಿಂದ ಹಣವನ್ನು ವರ್ಗಾಯಿಸುವುದು ಮತ್ತು ಹಾಕುವುದು.
- ಸಾಲದ ಅರ್ಜಿಗಳನ್ನು ಸಂಗ್ರಹಿಸುವುದು.
- ಸಣ್ಣ ಮೌಲ್ಯದ ಸಾಲವನ್ನು ವಿತರಿಸುವುದು.

**ಗಮನಿಸಿ**

### ನೀವು ಮಾಡಬಹುದಾದದ್ದು

- ನಿಮ್ಮ ಬಡಾವಣೆಯಲ್ಲಿನ ವ್ಯವಹಾರ ಪ್ರತಿನಿಧಿಯ ಲಭ್ಯತೆಯನ್ನು ನೀವು ನಿಮ್ಮ ಹತ್ತಿರದ ಬ್ಯಾಂಕ್ ಶಾಖೆಗೆ ಹೋಗಿ ತಿಳಿದುಕೊಳ್ಳಬಹುದು.
- ನಿಮಗೇನಾದರೂ ಸಂದೇಹವಿದ್ದಲ್ಲಿ ನಿಮ್ಮ ಬ್ಯಾಂಕ್‌ನಿಂದ ವ್ಯವಹಾರ ಪ್ರತಿನಿಧಿಯ ಹೆಸರು ಮತ್ತು ಇತರ ವಿವರಗಳನ್ನು ಪಡೆಯಬಹುದು.
- ನಿಮಗೆ ಹತ್ತಿರದಲ್ಲಿರುವ ವ್ಯವಹಾರ ಪ್ರತಿನಿಧಿಯ ಬಗ್ಗೆ ತಿಳಿಯಲು https://www.iba.org.in/bcregistry/ ಯನ್ನು ಸಂಪರ್ಕಿಸಬಹುದು.
- ವ್ಯವಹಾರ ಪ್ರತಿನಿಧಿಯ ಸೇವೆಯ ಬಗ್ಗೆ ನಿಮಗೆ ತೃಪ್ತಿ ಇರದಿದ್ದಲ್ಲಿ ನಿಮ್ಮ ಬ್ಯಾಂಕ್‌ನಲ್ಲಿ ಅವನ ಮೇಲೆ ದೂರು ನೀಡಬಹುದು.

# ಗಣಕೀಕೃತ (ಡಿಜಿಟಲ್) ಹಣಕಾಸು ಸಾಕ್ಷರತೆ



ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ಇಲಾಖೆ,
ಆರ್.ಬಿ.ಐ

## ಸಂದೇಶ–11 { ಸಣ್ಣ ಮೊತ್ತದ ರವಾನೆ }

ಹಣ ರವಾನೆ ಮಾಡಲು ಎನ್.ಇ.ಎಫ್.ಟಿ, ಆರ್.ಟಿ.ಜಿ.ಎಸ್ ಮತ್ತು ಐ.ಎಮ್.ಪಿ.ಎಸ್ ಮುಂತಾದವುಗಳು ಅತ್ಯಂತ ಜನಪ್ರಿಯ ಸಣ್ಣ ಮೊತ್ತದ ರವಾನೆಗಳ ಸಾಧನವಾಗಿವೆ. ಅಂತಹ ಸೇವೆಗಳು ಬ್ಯಾಂಕ್ ಶಾಖೆಗಳಲ್ಲಿ ಲಭ್ಯವಿರುತ್ತವೆ ಅಥವ ಆನ್‌ಲೈನ್ ಮಾರ್ಗಗಳಾದ ಅಂತರ್‌ಜಾಲ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್ ಮೂಲಕವೂ ಸಹ ನಿಮ್ಮ ಬ್ಯಾಂಕ್‌ಗಳಲ್ಲಿ ಲಭ್ಯವಿರುತ್ತವೆ.

ಈ ಕೆಳಗೆ ಮೂರು ಮಾರ್ಗಗಳ ವಿವರಣೆಯನ್ನು ನೀಡಲಾಗಿದೆ.

| ಸೇವೆಯ ಲಕ್ಷಣಗಳು | ಎನ್.ಇ.ಎಫ್.ಟಿ | ಆರ್.ಟಿ.ಜಿ.ಎಸ್ | ಐ.ಎಮ್.ಪಿ.ಎಸ್ |
|---|---|---|---|
| ವರ್ಗಾವಣೆ ಕಾಲಾವಧಿ  | ಕೆಲವು ಘಂಟೆಗಳು | ತಕ್ಷಣ | ತಕ್ಷಣ |
| ಗ್ರಾಹಕ ವ್ಯವಹಾರಕ್ಕೆ ಮೀಸಲಾದ ವೇಳಾಪಟ್ಟಿ  | 24/7 ದಿನಬಿಡೀ ವಾರಾಂತ್ಯ ಮತ್ತು ಬ್ಯಾಂಕ್ ರಜಾದಿನಗಳಲ್ಲೂ ಕಾರ್ಯ ನಿರ್ವಹಿಸಲಾಗುತ್ತದೆ. | ಬೆಳ್ಳಗ್ಗೆ 7 ಘಂಟೆಯಿಂದ ಸಂಜೆ 6ರವರೆಗೆ ವಾರದ ದಿನಗಳಲ್ಲಿ ಮತ್ತು ಕಾರ್ಯ ನಿರ್ವಹಿಸುವ ಶನಿವಾರಗಳಲ್ಲಿ | 24/7 ದಿನಬಿಡೀ ವಾರಾಂತ್ಯ ಮತ್ತು ಬ್ಯಾಂಕ್ ರಜಾದಿನಗಳಲ್ಲೂ ಕಾರ್ಯ ನಿರ್ವಹಿಸಲಾಗುತ್ತದೆ. |
| ಕನಿಷ್ಠ ಮೊತ್ತದ ಅಗತ್ಯತೆ  | ಯಾವುದೇ ಕನಿಷ್ಠ ಮೊತ್ತವಿಲ್ಲ | ₹ 2 ಲಕ್ಷ | ಯಾವುದೇ ಕನಿಷ್ಠ ಮೊತ್ತವಿಲ್ಲ |
| ವರ್ಗಾಯಿಸಬಹುದಾದ ಗರಿಷ್ಠ ಮೊತ್ತ  | ಯಾವುದೇ ಮೊತ್ತ | ಯಾವುದೇ ಮೊತ್ತ | ₹ 2 ಲಕ್ಷ |

## ಸಂದೇಶ–12 { ಏಕೀಕೃತ ಪಾವತಿಗಳ ಸಂಪರ್ಕ }



ಏಕೀಕೃತ ಪಾವತಿಗಳ ಸಂಪರ್ಕ ಅಥವಾ ಯು.ಪಿ.ಐ ಎಂಬುದು ಎರಡು ಬ್ಯಾಂಕ್ ಖಾತೆಗಳ ನಡುವೆ ಹಣ ವರ್ಗಾವಣೆ ಮಾಡುವ ಸಾಧನವಾಗಿದೆ. ಅಂತರ್ಜಾಲ ಸಂಪರ್ಕವಿರುವ ಯಾವುದೇ ಮೊಬೈಲ್ ಫೋನ್‌ನಿಂದ ಇದನ್ನು ಮಾಡಬಹುದು. ನೀವು ಭೀಮ್ (BHIM) ಆ್ಯಪ್ ಅಥವಾ ಬ್ಯಾಂಕ್‌ನ ಆ್ಯಪ್‌ಗಳನ್ನು ಬಳಸಿ ಇದನ್ನು ಮಾಡಬಹುದು. ಯಾವುದೇ ಮೂರನೇ ವ್ಯಕ್ತಿಯ ಆ್ಯಪ್ ಬಳಸಿಕೊಂಡು ಸಹ ಯುಪಿಐ ವ್ಯವಹಾರವನ್ನು ಮಾಡಬಹುದು.

### ಇದು ಹೇಗೆ ಕಾರ್ಯ ನಿರ್ವಹಿಸುತ್ತದೆ?

**ಅಗತ್ಯತೆಗಳು :**

ನಿಮಗೆ ಒಂದು ಬ್ಯಾಂಕ್ ಖಾತೆಯಿದ್ದು ಆ ಖಾತೆಗೆ ನಿಮ್ಮ ಮೊಬೈಲ್ ಸಂಖ್ಯೆ ಸಂಪರ್ಕ ಹೊಂದಿರಬೇಕು ಮತ್ತು ಅದು ಸ್ಮಾರ್ಟ್ ಫೋನ್ ಆಗಿದ್ದು ಅಂತರ್ಜಾಲ ಸಂಪರ್ಕ ಹೊಂದಿರಬೇಕು. ಖಾತೆಯೊಂದಿಗೆ ಸಂಪರ್ಕ ಹೊಂದಿರುವ ಡೆಬಿಟ್ ಕಾರ್ಡ್ ಒಮ್ಮೆ ಬೇಕಾಗುತ್ತದೆ. ಅದರಿಂದ ಮೊಬೈಲ್ ಫೋನಿಗೆ ಯುಪಿಐ ಹೊಂದಿಸಬಹುದು.

**ಯುಪಿಐ ಅನ್ನು ಸಕ್ರಿಯಗೊಳಿಸುವುದು ಹೇಗೆ?**

- ಮೊದಲಿಗೆ ನಿಮ್ಮ ಸ್ಮಾರ್ಟ್ ಫೋನ್‌ನಲ್ಲಿ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಿ. ಅದನ್ನು ಬ್ಯಾಂಕ್ ಖಾತೆಯೊಂದಿಗೆ ಸಂಪರ್ಕಿಸಿ. ಆ್ಯಪ್‌ನಲ್ಲಿರುವ ಆದೇಶಗಳಿಗನುಗುಣವಾಗಿ ಒಂದು ಯುಪಿಐನ ಪಿನ್ ಸೃಷ್ಟಿಸಿ.
- ಯುಪಿಐ ನ ಬಳಕೆಗಳು : ನಿಮ್ಮ ಯುಪಿಐ ಪಿನ್ ಬಳಸಿಕೊಂಡು ನಿಮಗೆ ಬೇಕಾದವರಿಗೆ ಅವರ ವರ್ಚುವಲ್ ವಿಳಾಸವನ್ನು ತಿಳಿದುಕೊಂಡು ಹಣವನ್ನು ವರ್ಗಾಯಿಸಬಹುದು.
- ಅವರಿಗೆ ವರ್ಚುವಲ್ ವಿಳಾಸವಿಲ್ಲದಿದ್ದರೆ ಐ.ಎಫ್.ಎಸ್.ಸಿ ಮತ್ತು ಖಾತೆ ಸಂಖ್ಯೆ ಮೂಲಕ ಹಣ ವರ್ಗಾಯಿಸುವ ಪರ್ಯಾಯವಿದೆ.

ಯುಪಿಐ ನಿಂದಾಗುವ ಲಾಭಗಳೇನು :

- ತಕ್ಷಣದಲ್ಲೇ ಹಣವನ್ನು ಕಳುಹಿಸಬಹುದು ಮತ್ತು ಸ್ವೀಕರಿಸಬಹುದು.
- ವರ್ಷದ 24/7, 365 ದಿನವೂ ರಜಾ ದಿನ ಭಾನುವಾರ ಸೇರಿದಂತೆ ಯಾವ ಸಮಯದಲ್ಲಾದರೂ ಹಣವನ್ನು ಸ್ಮಾರ್ಟ್ ಫೋನ್ ಮೂಲಕ ವರ್ಗಾಯಿಸಬಹುದು.
- ವರ್ಚುವಲ್ ಐ.ಡಿ ಬಳಕೆಯು, ಹಣ ವರ್ಗಾವಣೆಯನ್ನು ಸುಲಭಗೊಳಿಸುತ್ತದೆ ಹಾಗೂ ಸೂಕ್ಷ್ಮವಾದ ಬ್ಯಾಂಕ್ ಖಾತೆ ಮಾಹಿತಿಗಳನ್ನು ಹಂಚಿಕೊಳ್ಳಬೇಕಾದ ಸಂದರ್ಭವನ್ನು ನಿವಾರಿಸುತ್ತದೆ.

## ಯುಪಿಐಗೆ ಸಂಬಂಧಪಟ್ಟಂತೆ ಈ ಕೆಳಗಿನ ಬೇಕು/ಬೇಡಗಳು ನೆನಪಿನಲ್ಲಿರಲಿ

### ಬೇಕು :

- ಯುಪಿಐ (UPI) ಆ್ಯಪ್ ಅನ್ನು ಪುನರ್‌ನವೀಕರಿಸುತ್ತೀರಿ.
- ಯಾವಾಗಲೂ ವರ್ತಕ/ವ್ಯಕ್ತಿಯ ಸಂಗ್ರಹ ಮನವಿಯನ್ನು ಒಪ್ಪಿಕೊಳ್ಳುವ ಮೊದಲು ಪರಿಶೀಲಿಸಿ.
- ಹಣವನ್ನು ವರ್ಗಾಯಿಸುವ ಮೊದಲು ಮೊತ್ತವೆಷ್ಟು ಮತ್ತು ಅದು ಯಾರಿಗೆ ಸೇರುತ್ತದೆ ಎಂಬುದನ್ನು ಪದೇಪದೇ ಪರೀಕ್ಷಿಸಿಕೊಳ್ಳಿ.

### ಬೇಡ :

- ನಿಮ್ಮ ಪಿನ್ ಅನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ.
- ರುಜುವಾತು ಪಡಿಸಿಕೊಳ್ಳದೆ, ಸ್ವೀಕರಿಸುವವರ್ಯಾರೆಂಬುದನ್ನು ಪುನ: ಖಾತ್ರಿಪಡಿಸಿಕೊಳ್ಳದೆ ಹಣ ವರ್ಗಾವಣೆಯನ್ನು ಮಾಡಬೇಡಿ.

# ಸಂದೇಶ–13 { ವಿದ್ಯುನ್ಮಾನ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಮಾಡಬೇಕಾದ ಮತ್ತು ಮಾಡಬಾರದ ಸಂಗತಿಗಳು }

## ಆನ್‌ಲೈನ್ ಮತ್ತು ಮೊಬೈಲ್ ಬ್ಯಾಂಕಿಂಗ್



### ಮಾಡಬೇಕಾದದ್ದು :

- ಹಣ ಸಂದಾಯ ಮಾಡಲು ಯಾವಾಗಲು ವಿಶ್ವಾಸಾರ್ಹ ಮತ್ತು ರುಜುವಾತಾದ ಬ್ರೌಸರ್‌ಗಳನ್ನು ಮತ್ತು ಎಚ್.ಟಿ.ಟಿ.ಪಿ.ಎಸ್ ('ಎಸ್' ಸುರಕ್ಷತೆಯನ್ನು ಪ್ರತಿನಿಧಿಸುತ್ತದೆ.) ಸುರಕ್ಷಿತ ವೆಬ್ ಸೈಟ್‌ಗಳನ್ನು ಉಪಯೋಗಿಸಿ, ನಿಮ್ಮ ಬ್ಯಾಂಕ್‌ನ ಯುಆರ್‌ಎಲ್ ಅನ್ನು ಟೈಪ್ ಮಾಡಿ. ಯುಆರ್‌ಎಲ್ ಗವಾಕ್ಷಿಯಲ್ಲಿ ಸುರಕ್ಷಿತ ಚಿಹ್ನೆ ಇದೆಯೇ ಎಂದು ಗಮನಿಸಿ.
- ನಿಮ್ಮ ಪಾಸ್ ವರ್ಡ್‌ಗಳನ್ನು ಊಹಿಸಲು ಸಾಧ್ಯವಾಗದ ರೀತಿಯಲ್ಲಿ ರಚಿಸಿಕೊಳ್ಳಿ. ಆಲ್ಫಾ ನ್ಯೂಮರಿಕ್ ಮತ್ತು ವಿಶೇಷ ಚಿಹ್ನೆಗಳನ್ನು ಬಳಸಿ (#,*,@,$ ಇತ್ಯಾದಿ).
- ಆಗಾಗ ನಿಮ್ಮ ಪಾಸ್‌ವರ್ಡ್ ಬದಲಿಸುತ್ತಿರಿ.
- ಯಾವಾಗಲು ನಿಮ್ಮ ಪಾವತಿ ವ್ಯವಹಾರದ ಆ್ಯಪ್‌ಗಳನ್ನು (ಬ್ಯಾಂಕ್‌ಗಳ ಬ್ಯಾಂಕೇತರ ವ್ಯಾಲೆಟ್, ಇತ್ಯಾದಿ) ನೂತನ ಮಾದರಿಗಳಿಗನುಗುಣವಾಗಿ ನವೀಕರಿಸಿ.
- ನಿಮ್ಮ ಮೊಬೈಲ್ ಸಂಖ್ಯೆ ಹಾಗು ಇ-ಮೇಲ್ ಐ.ಡಿ. ಯನ್ನು ನಿಮ್ಮ ಬ್ಯಾಂಕ್ ಖಾತೆಯೊಂದಿಗೆ ಸಂಪರ್ಕಿಸಿ ಮತ್ತು ಎಸ್‌ಎಮ್‌ಎಸ್/ಇ-ಮೇಲ್ ಜಾಗೃತಿ ಸೇವೆಗಳನ್ನು ಬಳಸಿಕೊಳ್ಳಿ.
- ಯಾವುದೇ ಅಸಹಜವಾದ ಅನಧಿಕೃತ ವ್ಯವಹಾರವು ಕಂಡು ಬಂದಲ್ಲಿ ತಕ್ಷಣವೇ ಬ್ಯಾಂಕ್ ಗೆ ಮಾಹಿತಿ ನೀಡಿ.

### ಮಾಡಬಾರದ್ದು :

- ಆನ್‌ಲೈನ್ ಹುಡುಕಾಟದ ಮೂಲಕ ಎಂದಿಗೂ ನಿಮ್ಮ ಬ್ಯಾಂಕ್ ವೆಬ್‌ಸೈಟ್‌ಗಳನ್ನು ಸಂಪರ್ಕಿಸಬೇಡಿ.
- ನಿಮ್ಮ ಫೋನಿನಲ್ಲಿ ಎಂದಿಗೂ ನಿಮ್ಮ ಲಾಗಿನ್ ಮಾಹಿತಿಗಳನ್ನು ಉಳಿಸಿಕೊಳ್ಳಬೇಡಿ ಮತ್ತು ವಿಶ್ವಾಸಾರ್ಹವಲ್ಲದ ಪೋರ್ಟಲ್‌ಗಳಲ್ಲಿ/ಸೇವೆ ನೀಡುವವರಲ್ಲಿ ಮಾಹಿತಿಗಳನ್ನು ಸೇರಿಸಬೇಡಿ/ ಉಳಿಸಬೇಡಿ.
- ಸಾರ್ವಜನಿಕ ಉಪಕರಣಗಳು, ಸೈಬರ್ ಕೆಫೆಗಳು ಮತ್ತು ವಿಶ್ವಾಸಾರ್ಹವಲ್ಲದ ಸಾರ್ವಜನಿಕ/ ಉಚಿತ ವೈಫೈಗಳಾದ ಮುಕ್ತ ನೆಟ್‌ವರ್ಕ್‌ಗಳ ಮೂಲಕ ವ್ಯವಹರಿಸುವುದನ್ನು ಕೈಬಿಡಿ.
- ಎಂದಿಗೂ ನಿಮ್ಮ ಮೊಬೈಲ್ ಬ್ಯಾಂಕಿಂಗ್ ಪಿನ್ ಮತ್ತು ಅಂತರ್ಜಾಲ ಬ್ಯಾಂಕಿಂಗ್ ಐ.ಡಿ ಗುರುತನ್ನು, ಪಾಸ್‌ವರ್ಡ್ ಮತ್ತು ಓಟಿಪಿ ಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ. (ಬ್ಯಾಂಕ್ ಸಿಬ್ಬಂದಿಯನ್ನು ಒಳಗೊಂಡಂತೆ)

# ಸಂದೇಶ–14 ಎಟಿಎಂ ವ್ಯವಹಾರಗಳಲ್ಲಿ ಮಾಡಬೇಕಾದದ್ದು ಮತ್ತು ಮಾಡಬಾರದ್ದು

ನೀವು ನಿಮ್ಮ ಕಾರ್ಡ್ ಕಳೆದುಕೊಂಡಲ್ಲಿ ಅಥವಾ ಕಳ್ಳತನವಾಗಿದ್ದಲ್ಲಿ ಅಥವ ನಿಮಗೆ ಅದರಲ್ಲೇನೋ ಮೋಸವಾಗಿದೆ ಎಂದು ಅನ್ನಿಸಿದ ಪಕ್ಷದಲ್ಲಿ ಅದರ ದುರುಪಯೋಗವಾಗುವುದನ್ನು ತಡೆಯಲು ತಕ್ಷಣವೇ ಬ್ಯಾಂಕ್‌ಅನ್ನು ಸಂಪರ್ಕಿಸಿ.




ಎಟಿಎಂ ವ್ಯವಹಾರಗಳಲ್ಲಿ ಈ ಕೆಳಗಿನ ಮಾಡಬೇಕಾದದ್ದು ಮತ್ತು ಮಾಡಬಾರದ್ದನ್ನು ಗಮನದಲ್ಲಿಟ್ಟುಕೊಳ್ಳಿ

## ಮಾಡಬೇಕಾದದ್ದು :

- ನೀವು ಪಟ್ಟಿಯಿರುವ ಕಾರ್ಡ್ ಬದಲು ಇ.ಎಮ್.ವಿ. ಚಿಪ್ ಮತ್ತು ಪಿನ್ ಆಧಾರಿತ ಡೆಬಿಟ್ ಕಾರ್ಡ್ ಅನ್ನು ಮಾತ್ರ ಬಳಸುವುದನ್ನು ನಿಶ್ಚಿತ ಪಡಿಸಿಕೊಳ್ಳಿ. (ಆಯಸ್ಕಾಂತ ಪಟ್ಟಿಯಿರುವ ಕಾರ್ಡನ್ನು ಬದಲಾಯಿಸಿಕೊಳ್ಳಲು ನಿಮ್ಮ ಬ್ಯಾಂಕ್‌ಅನ್ನು ಸಂಪರ್ಕಿಸಿ)
- ನೀವು ಎಟಿಎಂ ಯಂತ್ರದ ಬಳಿ ನಿಮ್ಮ ಕಾರ್ಡ್ ಅನ್ನು ಉಪಯೋಗಿಸುವ ಸಂದರ್ಭದಲ್ಲಿ ಹತ್ತಿರದಲ್ಲೆಲ್ಲೂ ಅನಧಿಕೃತ ಕ್ಯಾಮರಾ ಅಥವಾ ಇನ್ನಿತರ ಸ್ಕಿಮ್ಮಿಂಗ್ ಸಾಧನಗಳಿಲ್ಲದಿರುವುದನ್ನು ನಿಶ್ಚಿತಪಡಿಸಿಕೊಳ್ಳಿ.
- ಎಟಿಎಂ ಯಂತ್ರದ ಬಳಿ ಪಿನ್ ಬಳಸುವಾಗ ಯಾರೂ ಅದನ್ನು ನೋಡುತ್ತಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಿ. ಕೀ ಫಲಕವನ್ನು ಒಂದು ಕೈಯಿಂದ ಮುಚ್ಚಿಕೊಂಡು ಇನ್ನೊಂದು ಕೈನಿಂದ ಪಿನ್ ಬಳಸುವುದು ಒಳ್ಳೆಯ ಹವ್ಯಾಸ.
- ಯಂತ್ರದಿಂದ ಬಂದ ನೋಟುಗಳನ್ನು ಪರೀಕ್ಷಿಸಿ ಎಣಿಸುವುದನ್ನು ನೆನಪಿನಲ್ಲಿಡಿ.
- ನಿಮ್ಮ ವ್ಯವಹಾರವು ಮುಗಿದನಂತರ ನಿಮ್ಮ ಕಾರ್ಡ್‌ಅನ್ನು ಹಿಂತೆಗೆದುಕೊಳ್ಳುವುದನ್ನು ನೆನಪಿನಲ್ಲಿಡಿ.
- ಎಟಿಎಂ ವ್ಯವಹಾರಗಳ ಬಗ್ಗೆ ಸಂದೇಶಗಳನ್ನು ಪಡೆಯಲು ನಿಮ್ಮ ಮೊಬೈಲ್ ಸಂಖ್ಯೆಯನ್ನು ನಿಮಗೆ ಕಾರ್ಡ್ ನೀಡಿರುವ ಬ್ಯಾಂಕ್‌ನೊಂದಿಗೆ ನೋಂದಾಯಿಸಿಕೊಳ್ಳಿ.
- ನೀವು ನಿಮ್ಮ ಕಾರ್ಡ್ ಕಳೆದುಕೊಂಡಿದ್ದಲ್ಲಿ ಅಥವಾ ಕಳ್ಳತನವಾಗಿದ್ದಲ್ಲಿ ನಿಮಗೆ ಅದರಲ್ಲೇನೊ ಮೋಸವಾಗಿದೆಯೆಂಬ ಅನಿಸಿಕೆಯಿದ್ದಲ್ಲಿ ಅದರ ದುರುಪಯೋಗವನ್ನು ತಡೆಯಲು ತಕ್ಷಣ ನಿಮ್ಮ ಬ್ಯಾಂಕ್ ಅನ್ನು ಸಂಪರ್ಕಿಸಿ, ನಿಮ್ಮ ಕಾರ್ಡನ್ನು ತಡೆಹಿಡಿಯಿರಿ.

### ಗಮನಿಸಿ :

ವಿಫಲವಾದ ಎಟಿಎಂ ವ್ಯವಹಾರದ ದೂರಿಗೆ ಸಂಬಂಧಿಸಿದಂತೆ ನಿಮಗೆ ಕಾರ್ಡ್ ನೀಡಿದ ಬ್ಯಾಂಕ್‌ಗೆ ತಕ್ಷಣದಲ್ಲೇ ತಿಳಿಸಿ. ಬ್ಯಾಂಕ್‌ಗಳು ಟಿ+5 ದಿನಗಳಲ್ಲಿ ವಿಫಲ ಎಟಿಎಂ ವ್ಯವಹಾರಗಳನ್ನು ಸರಿಪಡಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ನಿಮಗೆ ದಿನವೊಂದಕ್ಕೆ ₹100 ಗಳ ಪರಿಹಾರ ನೀಡಬೇಕು.

## ಮಾಡಬಾರದ್ದು:

- ನಿಮ್ಮ ಎಟಿಎಂ ಕಾರ್ಡ್‌ಗಳ ವಿವರಗಳನ್ನು (ಕಾರ್ಡ್ ಸಂಖ್ಯೆ, ಕಾರ್ಡ್‌ನ ಅವಧಿಯ ಅಂತ್ಯದ ದಿನಾಂಕ, ಪಿನ್ ಮತ್ತು ಸಿವಿವಿ ಇತ್ಯಾದಿ) ಯಾರೊಂದಿಗೂ ಹಂಚಿಕೊಳ್ಳಬಾರದು.
- ಎಟಿಎಂ ಯಂತ್ರದಲ್ಲಿ ಎಂದಿಗೂ ಕಾರ್ಡನ್ನು ಬಿಡಬೇಡಿ.
- ನಿಮ್ಮ ಒಟಿಪಿ ಯನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ.
- ಎಂದಿಗೂ ಕಾರ್ಡ್ ಮೇಲೆ ನಿಮ್ಮ ಪಿನ್ ಅನ್ನು ಬರೆಯಬೇಡಿ.

# ಸಂದೇಶ–15 { ಮೋಸದ ಗಣಕೀಕೃತ (ಡಿಜಿಟಲ್) ವ್ಯವಹಾರಗಳಲ್ಲಿ ಗ್ರಾಹಕರ ಹೊಣೆಗಾರಿಕೆ }

ಯಾವುದೇ ವಿದ್ಯುನ್ಮಾನ ಎಟಿಎಂ ವ್ಯವಹಾರವನ್ನು ಮಾಡುವಾಗ ನಿಮ್ಮ ಅಜಾಗರೂಕತೆಯಿಂದ ಮೋಸವುಂಟಾಗಿ ನಿಮಗೆ ನಷ್ಟವಾಗುವ ಸಾಧ್ಯತೆಯಿರುತ್ತದೆ.

## ನಿಮ್ಮ ಬ್ಯಾಂಕ್‌ನ ಗಮನಕ್ಕೆ ತನ್ನಿ

- ನಿಮ್ಮ ಖಾತೆಯ/ಕಾರ್ಡ್‌ನ ವಿದ್ಯುನ್ಮಾನ ಬ್ಯಾಂಕಿಂಗ್ ವ್ಯವಹಾರದಲ್ಲಿ ಮೋಸದ ಅಥವಾ ಅನಧಿಕೃತ ವ್ಯವಹಾರವು ಕಂಡುಬಂದಲ್ಲಿ ತಪ್ಪು ಯಾರದ್ದೇ ಆಗಿದ್ದರೂ ಅದನ್ನು ತಕ್ಷಣವೇ ನಿಮ್ಮ ಬ್ಯಾಂಕ್‌ನ ಗಮನಕ್ಕೆ ತನ್ನಿ.
- ನೀವು ಅಂತಹ ವ್ಯವಹಾರಗಳನ್ನು ನಿಮ್ಮ ಬ್ಯಾಂಕ್ ಗೆ ತಿಳಿಸಲು ತಡ ಮಾಡಿದಷ್ಟು ನಿಮಗೆ ಹಾಗೂ ನಿಮ್ಮ ಬ್ಯಾಂಕ್‌ಗೆ ನಷ್ಟವು ಹೆಚ್ಚಾಗುತ್ತಾ ಹೋಗುತ್ತದೆ.

## ಬ್ಯಾಂಕ್‌ನ ಜವಾಬ್ದಾರಿ :

ನೀವು ಬ್ಯಾಂಕ್‌ಗೆ ತಿಳಿಸಿದ ನಂತರವೂ ಸಹ ಮೋಸದ ವ್ಯವಹಾರವು ಮುಂದುವರೆದಲ್ಲಿ ನಷ್ಟವನ್ನು ಬ್ಯಾಂಕ್ ಭರಿಸಬೇಕಾಗುತ್ತದೆ.

- ನೀವು ಬ್ಯಾಂಕ್‌ಗೆ ದೂರು ನೀಡಿದ ಸಂದರ್ಭದಲ್ಲಿ ಬ್ಯಾಂಕ್ ನಿಮಗೆ ಸ್ವೀಕೃತಿಯೊಂದನ್ನು ಒದಗಿಸಬೇಕು.
- ಬ್ಯಾಂಕ್ ೯೦ ದಿನಗಳೊಳಗಾಗಿ ನಿಮ್ಮ ದೂರನ್ನು ಬಗೆಹರಿಸಬೇಕು.
- ಗ್ರಾಹಕರು ಅಂತಹ ದೂರು ನೀಡಿದ ನಂತರ 10 ದಿನಗಳೊಳಗಾಗಿ ಬ್ಯಾಂಕ್ ಗ್ರಾಹಕರಿಗಾಗಿರುವ ನಷ್ಟವನ್ನು ಅವರ ಖಾತೆಗೆ ಜಮಾ ಮಾಡಬೇಕು (ಶ್ಯಾಡೊ ರಿವರ್ಸಲ್).

## ಸೀಮಿತ ಹೊಣೆಗಾರಿಕೆ :

- ನಷ್ಟವು ಗ್ರಾಹಕರ ಅಜಾಗರೂಕತೆಯಿಂದ (ಪಾಸ್‌ವರ್ಡ್ ಹಂಚಿಕೊಳ್ಳುವುದು ಇತ್ಯಾದಿ) ಆಗಿದ್ದರೆ, ಬ್ಯಾಂಕ್‌ಗೆ ಮಾಹಿತಿ ನೀಡುವವರೆಗಿನ ಕಾಲಾವಧಿಯಲ್ಲಿನ ನಷ್ಟವನ್ನು ಗ್ರಾಹಕರೇ ಭರಿಸಬೇಕಾಗುತ್ತದೆ.
- ಗ್ರಾಹಕರ ಅಜಾಗರೂಕತೆ ಇಲ್ಲದೇ ಇದ್ದಲ್ಲಿ, ತಕ್ಷಣವೇ ಅದರ ಬಗ್ಗೆ ಬ್ಯಾಂಕ್‌ಗೆ ಮಾಹಿತಿ ನೀಡಿದ್ದರೆ (ಅನಧಿಕೃತ ವ್ಯವಹಾರವಾದ ಮೂರು ದಿನದೊಳಗಾಗಿ) ಗ್ರಾಹಕನ ಮೇಲೆ ಯಾವುದೇ ಹೊಣೆಗಾರಿಕೆ ಇರುವುದಿಲ್ಲ.

ಒಂದು ಅನಧಿಕೃತ ವಿದ್ಯುನ್ಮಾನ ಬ್ಯಾಂಕಿಂಗ್ ವ್ಯವಹಾರದಲ್ಲಿ ಬ್ಯಾಂಕ್ ಅಥವಾ ಗ್ರಾಹಕ ಇಬ್ಬರ ಪಾತ್ರವೂ ಇಲ್ಲದೆ ನಷ್ಟವು ಬೇರೆಡೆಯ ವ್ಯವಸ್ಥೆಯ ತೊಡಕಿನಿಂದಾಗಿ ಆಗಿದ್ದ ಸಂದರ್ಭದಲ್ಲಿ (ಅಂತಹ ವ್ಯವಹಾರದ ಬಗೆ ಬ್ಯಾಂಕ್ ಗ್ರಾಹಕನಿಗೆ ತಿಳಿಸಿದ ನಂತರವೂ ಅವನ ಕಡೆಯಿಂದ ಮಾಹಿತಿ ಬರಲು 4 ರಿಂದ 7 ಕೆಲಸದ ದಿನಗಳಷ್ಟು ತಡವಾಗಿದ್ದರೆ)

ಗ್ರಾಹಕನ ವ್ಯವಹಾರದ ಹೊಣೆಗಾರಿಕೆಯು. ವ್ಯವಹಾರದ ಮೌಲ್ಯಕ್ಕೆ ಸೀಮಿತವಾಗಿರುತ್ತದೆ. ಅಥವಾ ಈ ಕೆಳಗೆ ಹೇಳಿರುವ ಮೊತ್ತದಷ್ಟಿರುತ್ತದೆ. ವ್ಯವಹಾರದ ಮೌಲ್ಯ ಅಥವಾ ಕೆಳಗೆ ಹೇಳಿರುವ ಮೊತ್ತಕ್ಕೆ – ಎರಡರಲ್ಲಿ ಯಾವುದು ಕಡಿಮೆಯಿರುತ್ತದೋ ಆ ಮೊತ್ತಕ್ಕೆ – ಸೀಮಿತವಾಗಿರುತ್ತದೆ.

| ಖಾತೆಯ ಮಾದರಿ | ಗರಿಷ್ಠ ಹೊಣೆಗಾರಿಕೆ |
|---|---|
| • ಬಿ.ಎಸ್.ಬಿ.ಡಿ ಖಾತೆಗಳು | ₹5000/- |
| • ಎಲ್ಲಾ ಉಳಿತಾಯ ಖಾತೆಗಳು<br>• ಮುಂಗಡ-ಸಂದಾಯ ಪಾವತಿ ಸಲಕರಣೆಗಳು ಮತ್ತು ಉಡುಗೊರೆ ಕಾರ್ಡ್‌ಗಳು<br>• ಎಂ.ಎಸ್.ಎಂ.ಇ ಗಳ ಚಾಲ್ತಿ ಖಾತೆಗಳು/ನಗದು ಸಾಲ ಮತ್ತು ಓವರ್ ಡ್ರಾಫ್ಟ್ ಖಾತೆಗಳು.<br>• ಮೋಸಕ್ಕೆ ಮುಂಚಿನ 365 ದಿನಗಳ ಅವಧಿಯಲ್ಲಿ 25ಲಕ್ಷ ವಾರ್ಷಿಕ ಸರಾಸರಿ ಶಿಲ್ಕಿನ ಮಿತಿಯೊಳಗೆ ಇರುವ ವ್ಯಕ್ತಿಗಳ – ಚಾಲ್ತಿ ಖಾತೆಗಳು/ನಗದು ಸಾಲ/ಓವರ್ ಡ್ರಾಫ್ಟ್ ಖಾತೆಗಳು<br>• ₹5 ಲಕ್ಷಗಳ ಮಿತಿಯೊಳಗಿನ ಕ್ರೆಡಿಟ್ ಕಾರ್ಡ್‌ಗಳು | ₹10000/- |
| • ಉಳಿದೆಲ್ಲಾ ಚಾಲ್ತಿ ಖಾತೆ /ನಗದು ಸಾಲ/ಓವರ್ ಡ್ರಾಫ್ಟ್ ಖಾತೆಗಳು<br>• ₹5ಲಕ್ಷಗಳ ಮಿತಿಯನ್ನು ಮೀರಿದ ಕ್ರೆಡಿಟ್ ಕಾರ್ಡ್‌ಗಳು | ₹25000/- |

**ಎಚ್ಚರಿಕೆ !!**

ಮೋಸದ ವ್ಯವಹಾರವು ನಿಮ್ಮ ಅಲಕ್ಷ್ಯದಿಂದ ಆಗಿದ್ದಲ್ಲಿ, ಅಂದರೆ ನಿಮ್ಮ ಪಾಸ್‌ವರ್ಡ್, ಪಿನ್, ಓಟಿಪಿ, ಇತ್ಯಾದಿಗಳನ್ನು ಇತರರೊಂದಿಗೆ ಹಂಚಿಕೊಂಡ ಸಲುವಾಗಿ ಆಗಿದ್ದರೆ ನೀವು ಬ್ಯಾಂಕ್‌ಗೆ ವರದಿ ಮಾಡುವವರೆಗೂ ನಷ್ಟವನ್ನು ನೀವೇ ಭರಿಸಬೇಕಾಗುತ್ತದೆ.

**ನೆನಪಿನಲ್ಲಿಡಿ:**

ಮೋಸದ ವ್ಯವಹಾರಗಳನ್ನು ನಿಮ್ಮ ಬ್ಯಾಂಕ್‌ಗೆ ತಕ್ಷಣವೇ ತಿಳಿಸಲು ನಿಮ್ಮ ಬ್ಯಾಂಕ್ ವಿವರಗಳನ್ನು ಕೈಗೆಟಕುವಂತಿಟ್ಟುಕೊಂಡಿರಬೇಕು.


ಹಣಕಾಸು ಅರಿವಿನ ಸಂದೇಶಗಳು (ಫೇಮ್)

# ಗ್ರಾಹಕ ಸಂರಕ್ಷಣೆ



ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ಇಲಾಖೆ,
ಆರ್.ಬಿ.ಐ

# ಸಂದೇಶ–16 { ತಪ್ಪು–ಮಾರಾಟ }




## ನೆನಪಿಡಿ :

- ಉಳಿತಾಯಗಳೊಡನೆ ವಿಮೆಯನ್ನು ಸೇರಿಸುವುದು ಒಳ್ಳೆಯ ಅಭ್ಯಾಸವಲ್ಲ. ನಿಮ್ಮ ವಿಮೆ ಅಗತ್ಯತೆಗಳನ್ನು ಮತ್ತು ಹೂಡಿಕೆ ಅಗತ್ಯತೆಗಳನ್ನು ಬೇರೆ ಬೇರೆಯಾಗಿ ಲೆಕ್ಕಹಾಕಿ ನೋಡಿ.
- ವಿಮೆಯನ್ನು ಅಥವಾ ಹೂಡಿಕೆ ಉತ್ಪನ್ನವನ್ನು ನಿಮಗೆ ಅಗತ್ಯವಿದ್ದಲ್ಲಿ ಮಾತ್ರ ತೆಗೆದುಕೊಳ್ಳಿ ಯಾವುದನ್ನೇ ತೆಗೆದುಕೊಳ್ಳುವಂತೆ ಬ್ಯಾಂಕ್ ನಿಮಗೆ ಬಲವಂತ ಮಾಡುವಂತಿಲ್ಲ.
- ರುಜು ಹಾಕುವ ಮೊದಲು ಅರ್ಜಿಗಳನ್ನು ಚೆನ್ನಾಗಿ ಓದಿ. ಖಾಲಿ ಫಾರ್ಮ್‌ಗಳ ಮೇಲೆ ನಿಮ್ಮ ಸಹಿ ಹಾಕುವುದನ್ನು ತಪ್ಪಿಸಿ.
- ನೀವು ಕೇಳದ ಉತ್ಪನ್ನವನ್ನು ಬ್ಯಾಂಕ್ ನಿಮಗೆ ಮಾರಾಟ ಮಾಡಿದರೆ ಅಥವಾ ಮಹತ್ವಪೂರ್ಣ ನಿಬಂಧನೆಗಳನ್ನು ವಿವರಿಸದಿದ್ದ ಸಂದರ್ಭದಲ್ಲಿ ಬ್ಯಾಂಕ್‌ಗೆ ದೂರು ನೀಡಲು ಹಿಂಜರಿಯದಿರಿ. ಬ್ಯಾಂಕ್ ನೀಡಿದ ಪ್ರತಿಕ್ರಿಯೆಯಿಂದ ನಿಮಗೆ ಸಮಾಧಾನವಾಗದಿದ್ದರೆ ಆರ್.ಬಿ.ಐ ನ ಬ್ಯಾಂಕಿಂಗ್ ಲೋಕಪಾಲರಿಗೆ (Banking Ombudsman) ಬರವಣಿಗೆಯಲ್ಲಿ ದೂರು ನೀಡಬಹುದು. ಅಥವಾ ಆರ್.ಬಿ.ಐ. ದೂರು ನಿರ್ವಹಣಾ ವ್ಯವಸ್ಥೆಯಲ್ಲೂ ದೂರನ್ನು ದಾಖಲಿಸಬಹುದು (ಸಂದೇಶ – ೧೯ ನೋಡಿ).
- ಬ್ಯಾಂಕುಗಳು ತಮ್ಮ ಶಾಖೆಗಳಲ್ಲಿ ಬ್ಯಾಂಕಿಂಗ್ ಲೋಕಪಾಲರ ವಿವರಗಳನ್ನು ಪ್ರದರ್ಶಿಸಬೇಕು.

# ಸಂದೇಶ 17 { ಸಚೇತ್ ಪೋರ್ಟಲ್ }




## ಆಗ ನೀವೇನು ಮಾಡುತ್ತೀರಿ?


- ಸರ್ಕಾರ ಅಥವಾ ಆರ್.ಬಿ.ಐ , ಎಸ್.ಇ.ಬಿ.ಐ , ಐ.ಆರ್.ಡಿ.ಎ.ಐ , ಪಿ.ಎಫ್.ಆರ್.ಡಿ.ಎ ಮುಂತಾದ ನಿಯಂತ್ರಿತ ಅಥವಾ ನೊಂದಾಯಿತ ಸಂಸ್ಥೆಗಳಲ್ಲಿ ಮಾತ್ರ ಹೂಡಿ ಅಥವಾ ಠೇವಣಿ ತೆರೆಯಿರಿ.
- ಹೆಚ್ಚಿನ ಆದಾಯದ ವಾಗ್ದಾನ ನೀಡುವ ಯೋಜನೆಗಳಿಂದ ಪ್ರಲೋಭನೆಗೊಳಗಾಗದಿರಿ, ಅವು ಮೋಸದ ಯೋಜನೆಗಳಾಗಿರಬಹುದು.
- ಬ್ಯಾಂಕ್ ಬಡ್ಡಿದರ ಪ್ರಮಾಣಕ್ಕಿಂತ ಕಡಿಮೆ ಬಡ್ಡಿದರ ಪ್ರಮಾಣ ಹೊಂದಿರುವ ಸಂಸ್ಥೆಗಳಿಂದ ಸಾಲ ತೆಗೆದುಕೊಳ್ಳಬೇಡಿ. ಅವರು ಪ್ರಕ್ರಿಯಾ ಶುಲ್ಕವನ್ನು ನಿಮ್ಮಿಂದ ತೆಗೆದುಕೊಂಡು ಕಣ್ಮರೆಯಾಗಬಹುದು.


www.sachet.rbi.org.in ಯಾವುದೇ ಯೋಜನೆಯ ಹೆಸರಿನಲ್ಲಿ ನಿಮ್ಮಿಂದ ಪಡೆದ ಠೇವಣಿ ಮೊತ್ತವನ್ನಾಗಲಿ ಅಥವಾ ಸಂಗ್ರಹಿಸಿದ ಹಣವನ್ನಾಗಲಿ ಹಿಂದಿರುಗಿಸದಿದ್ದರೆ ನೀವು ಮೇಲೆ ಹೇಳಿದ ವಿಳಾಸಕ್ಕೆ ಅಂತಹ ಸಂಸ್ಥೆಗಳ ವಿರುದ್ಧ ದೂರು ಅಥವಾ ವರದಿ ನೀಡಬಹುದು.

# ಸಂದೇಶ–18 {ನಂಬಲಿಕ್ಕಾಗದಷ್ಟು ಒಳ್ಳೆಯದೇ?}

**ನಾಣ್ನುಡಿ**

**"ಬಿಟ್ಟಿ ಉಡುಗೊರೆ ಎಂಬುದು ಎಲ್ಲಿಯೂ ಇಲ್ಲ"**
**ನೀವೆಂದೂ ಕೊಳ್ಳದ ಲಾಟರಿ ಚೀಟಿ ಬಹುಮಾನವನ್ನು ಅಥವ ಹಣವನ್ನು ಉಚಿತವಾಗಿ ನೀಡಲಾಗುತ್ತದೆಂದು ಯಾರಾದರೂ ವಾಗ್ದಾನ ಮಾಡಿದರೆ ನೀವು ನಿಧಾನವಾಗಿ ಯೋಚಿಸಬೇಕಾಗುತ್ತದೆ – ಏಕೆ?**
**ಇದು ನಿಜವಾಗಲೂ ಒಳ್ಳೆಯದೇ?**




**ನೀವು ಇಂತಹ ಸುದ್ದಿಗಳಿಗೆ ಬಲಿಯಾಗಬೇಡಿ! ನೆನಪಿನಲ್ಲಿಡಿ :**

- ಆರ್.ಬಿ.ಐ/ಬ್ಯಾಂಕ್‌ಗಳು ನಿಮ್ಮನ್ನೆಂದಿಗೂ ನಿಮ್ಮ ಖಾತೆಯ/ಕ್ರೆಡಿಟ್ ಕಾರ್ಡ್/ಡೆಬಿಟ್ ಕಾರ್ಡ್ ವಿವರಗಳನ್ನು ಕೇಳುವುದಿಲ್ಲ. ಪಿನ್, ಓ.ಟಿ.ಪಿ ಮುಂತಾದವುಗಳನ್ನು ಫೋನ್ ಮೂಲಕವಾಗಲೀ ಅಥವಾ ಇ-ಮೇಲ್ ಮೂಲಕವಾಗಲಿ ಕೇಳುವುದಿಲ್ಲ.

- ಆರ್.ಬಿ.ಐ ಉಳಿತಾಯ ಖಾತೆಯನ್ನಾಗಲಿ/ ಚಾಲ್ತಿ ಖಾತೆಯನ್ನಾಗಲಿ/ನಿಶ್ಚಿತ ಖಾತೆಯನ್ನಾಗಲಿ ಯಾವುದೇ ವ್ಯಕ್ತಿಗಳಿಂದ ತೆರೆಸುವುದಿಲ್ಲ. ಅಥವಾ ಕ್ರೆಡಿಟ್ ಕಾರ್ಡ್/ಡೆಬಿಟ್ ಕಾರ್ಡ್‌ಗಳನ್ನು ನೀಡುವುದಿಲ್ಲ ಅಥವಾ ಯಾವುದೇ ವ್ಯಕ್ತಿಯೊಂದಿಗೆ ವೈಯಕ್ತಿಕವಾಗಿ ವ್ಯವಹರಿಸುವುದಿಲ್ಲ.

**ಮೋಸದ ಪ್ರಲೋಭನೆಗಳ ಬಗ್ಗೆ ಎಚ್ಚರವಾಗಿರಿ**
**ನಿಮ್ಮ ಖಾತೆಗೆ ಸಂಬಂಧಿಸಿದ ವಿವರಗಳನ್ನು ಯಾರಿಗೂ ಒದಗಿಸಬೇಡಿ.**



## ಆರ್.ಬಿ.ಐ ಹೇಳುತ್ತದೆ ಮತ್ತು RBISAY

ಸಾರ್ವಜನಿಕ ಶಿಕ್ಷಣಕ್ಕಾಗಿ ಆರ್.ಬಿ.ಐ ಸಮೂಹ ಮಾಧ್ಯಮ ಸಾರ್ವಜನಿಕ ಜಾಗೃತಿ ಪ್ರಚಾರವನ್ನು ಕೈಗೆತ್ತಿಕೊಂಡಿದೆ. ಸಾರ್ವಜನಿಕರಿಗೆ ಹಣಕಾಸು ಸಾಕ್ಷರತೆ ಮತ್ತು ಗ್ರಾಹಕ ಸುರಕ್ಷತೆಯ ಬಗ್ಗೆ ತಿಳುವಳಿಕೆ ನೀಡಲು (ಎಸ್.ಎಂ.ಎಸ್. ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮ. ಫೇಸ್‌ಬುಕ್ ಮತ್ತು ಟ್ವಿಟರ್) ಗಳ ಮೂಲಕ ಪ್ರಚಾರವನ್ನು ಆಯೋಜಿಸಿದೆ.

ಎಸ್.ಎಂ.ಎಸ್ ಪ್ರಚಾರಗಳಲ್ಲಿ ಆರ್.ಬಿ.ಐ 'RBISAY' ಇಂದ ಸಂದೇಶಗಳನ್ನು ಕಳುಹಿಸುತ್ತದೆ. ಹೆಚ್ಚಿನ ವಿವರಗಳಿಗಾಗಿ 14440 ಗೆ ಕರೆ ಮಾಡಿ.

# ಸಂದೇಶ-19 { ದೂರು ನಿವಾರಣಾ ಕಾರ್ಯವಿಧಾನ }

ಬ್ಯಾಂಕುಗಳ/ಎನ್.ಬಿ.ಎಫ್.ಸಿಗಳ ಮತ್ತು ಪಾವತಿ ವ್ಯವಸ್ಥೆಗಳಲ್ಲಿನ ಸೇವೆಗಳಲ್ಲಿ ಗ್ರಾಹಕರಿಗೆ ಕುಂದು ಕೊರತೆಗಳು ಕಂಡು ಬಂದಲ್ಲಿ ಅದನ್ನು ನಿವಾರಿಸಲು ಕ್ಷಿಪ್ರ ವೆಚ್ಚ-ಮುಕ್ತ ವ್ಯವಸ್ಥೆಯನ್ನು ಆರ್.ಬಿ.ಐ ರಚಿಸಿದೆ. ಆರ್.ಬಿ.ಐ ತನ್ನ ಬ್ಯಾಂಕಿಂಗ್ ಲೋಕಪಾಲರ ಯೋಜನೆಯಡಿಯಲ್ಲಿ ಇದನ್ನು ರೂಪಿಸಿದೆ.
https://rbi.org.in/Scripts/Complaints.aspx
or cms.rbi.org.in



भारतीय रिज़र्व बैंक
ಭಾರತೀಯ ರಿಸರ್ವ್ ಬ್ಯಾಂಕ್

Complaint Management System
ದೂರು ನಿರ್ವಹಣಾ ವ್ಯವಸ್ಥೆ

**ಬ್ಯಾಂಕಿಂಗ್ ಲೋಕಪಾಲರೊಂದಿಗೆ ದೂರು ನೀಡುವ ಮೊದಲು ಕೆಳಗಿನ ಅಂಶಗಳನ್ನು ಯಾವಾಗಲೂ ನೆನಪಿನಲ್ಲಿಡಿ**

- ನೀವು ದೂರು ನಿವಾರಣೆಗಾಗಿ ಮೊದಲು ಬ್ಯಾಂಕ್/ಎನ್.ಬಿ.ಎಫ್.ಸಿ ಅಥವಾ ಪಾವತಿ ವ್ಯವಸ್ಥೆಯಲ್ಲಿ ಭಾಗವಹಿಸುವವರನ್ನು ಸಂಪರ್ಕಿಸಿ.
- ಬ್ಯಾಂಕ್/ಎನ್.ಬಿ.ಎಫ್.ಸಿ ಅಥವಾ ಪಾವತಿ ವ್ಯವಸ್ಥೆಯಲ್ಲಿ ಭಾಗವಹಿಸಿದವರನ್ನು ಸಂಪರ್ಕಿಸಿ, ಒಂದು ತಿಂಗಳಿನ ನಂತರವೂ ನಿಮ್ಮ ದೂರು ನಿವಾರಣೆಯಾಗದಿದ್ದರೆ ಅಥವಾ ಅವರು ನೀಡಿದ ಪರಿಹಾರದಿಂದ ನೀವು ತೃಪ್ತರಾಗದಿದ್ದರೆ ನಂತರದಲ್ಲಿ ನೀವು ಬ್ಯಾಂಕಿಂಗ್ ಲೋಕಪಾಲರೊಂದಿಗೆ ದೂರು ದಾಖಲಿಸಬಹುದು.(ಪ್ರತಿಕ್ರಿಯೆ ದೊರೆತ ಒಂದು ವರ್ಷದೊಳಗೆ)
- ಸಂಬಂಧಿತ ಬ್ಯಾಂಕಿಂಗ್ ಲೋಕಪಾಲರ ಯೋಜನೆಗಳಲ್ಲಿ ಹೆಸರಿಸಿರುವ ಅಂಶಗಳ ಅಡಿಯಲ್ಲಿ ದೂರು ಇರಬೇಕು.
- ದೂರುಗಳಲ್ಲಿ ಅಗತ್ಯ ವಿವರಗಳಿರಬೇಕು ಮತ್ತು ಮಾಹಿತಿಗಳಿರಬೇಕು. ಅವುಗಳನ್ನು ನ್ಯಾಯಾಲಯಗಳಲ್ಲಾಗಲೀ, ಇನ್ಯಾವುದೇ ವೇದಿಕೆಗಳಲ್ಲಾಗಲೀ ಪರಿಶೀಲಿಸಲಾಗಿದ್ದಲ್ಲಿ ಅಥವಾ ಪರಿಶೀಲನೆ ನಡೆಯುತ್ತಿದ್ದ ಪಕ್ಷದಲ್ಲಿ ಸ್ವೀಕರಿಸಲಾಗುವುದಿಲ್ಲ. ಅದನ್ನು ಹಿಂದೆ ಬ್ಯಾಂಕಿಂಗ್ ಲೋಕಪಾಲರು ಇತ್ಯರ್ಥ ಮಾಡಿದ್ದ ಪಕ್ಷದಲ್ಲಿ ಸಹ ಸ್ವೀಕರಿಸಲಾಗುವುದಿಲ್ಲ.
- ಸಿ.ಎಂ.ಎಸ್‌ನ ಕುರಿತು ನಿರ್ದಿಷ್ಟ ಮಾದರಿಯಲ್ಲಿ ದೂರು ನೀಡಿದರೆ ಬ್ಯಾಂಕಿಂಗ್ ಲೋಕಪಾಲರಿಂದ ಅದನ್ನು ತ್ವರಿತವಾಗಿ ಇತ್ಯರ್ಥ ಪಡಿಸಬಹುದು.

## ದೂರು ನೀಡುವ ಕಾರ್ಯವಿಧಾನ

### ಯಾವಾಗ??



- ದೂರಿಗೆ ಬ್ಯಾಂಕ್/ಎನ್.ಬಿ.ಎಫ್.ಸಿ/ ಪಾವತಿ ವ್ಯವಸ್ಥೆಯ ಸಿಬ್ಬಂದಿಯಿಂದ ಒಂದು ತಿಂಗಳೊಳಗಾಗಿ ಪ್ರತಿಕ್ರಿಯೆ ಬರದಿದ್ದಾಗ ದೂರು ನೀಡಬಹುದು.
- ಬ್ಯಾಂಕ್ / ಎನ್.ಬಿ.ಎಫ್.ಸಿ. / ಪಾವತಿ ವ್ಯವಸ್ಥೆಯ ಸಿಬ್ಬಂದಿಯ ಪ್ರತಿಕ್ರಿಯೆಯಿಂದ ದೂರುದಾರರಿಗೆ ತೃಪ್ತಿಯಾಗದಿದ್ದಲ್ಲಿ ಬ್ಯಾಂಕಿಂಗ್ ಲೋಕಪಾಲರಲ್ಲಿ ದೂರು ದಾಖಲಿಸಬಹುದು.

### ಎಲ್ಲಿ??

- ಶಾಖೆ / ಬ್ಯಾಂಕ್ / ಎನ್.ಬಿ.ಎಫ್.ಸಿ. / ಪಾವತಿ ವ್ಯವಸ್ಥೆ ಯಾವ ಬ್ಯಾಂಕಿಂಗ್ ಲೋಕಪಾಲರ ಪರಿಧಿಯಲ್ಲಿ ಬರುತ್ತದೋ ಅವರ ನೊಂದಾಯಿತ ಕಛೇರಿಯಲ್ಲಿ, ಬ್ಯಾಂಕಿನ ಶಾಖೆಯಲ್ಲಿ ದೂರು ದಾಖಲಿಸಬಹುದು.

(https://rbi.org.in/Scripts/Complaints.aspx or cms.rbi.org.in).

### ಹೇಗೆ??


- ಆರ್.ಬಿ.ಐ ನ ದೂರು ನಿವಾರಣಾ ವ್ಯವಸ್ಥೆಗೆ (cms.rbi.org.in) ಯೋಜನೆಯ ಅನುಬಂಧದಲ್ಲಿರುವ ಅರ್ಜಿ ಮಾದರಿಯಲ್ಲಿ ಸೂಕ್ತವಾಗಿ ಸಹಿ ಮಾಡಿದ ದೂರನ್ನು ಸಲ್ಲಿಸಿ ಅಥವಾ ಇ-ಮೇಲ್ ಮಾಡಿ, ಅಂಚೆಯ ಮೂಲಕವೂ ಕಳುಹಿಸಬಹುದು.
- ದೂರಿನಲ್ಲಿ ದೂರುದಾರರ ಹೆಸರು ಮತ್ತು ವಿವರಗಳನ್ನು (ವಿಳಾಸ, ಇ-ಮೇಲ್, ಫೋನ್ ಸಂಖ್ಯೆ) ಮತ್ತು ಸಂಬಂಧಿತ ಬ್ಯಾಂಕ್/ಎನ್‌ಬಿಎಫ್‌ಸಿ / ಪಾವತಿ ವ್ಯವಸ್ಥೆಯ ಬಾಗಿದಾರರ ಸಂಖ್ಯೆ ವಿವರಗಳನ್ನು ತಿಳಿಸಿ.
- ದೂರಿನ ಲಕ್ಷಣ, ನಷ್ಟ ಮತ್ತು ಕೇಳಿರುವ ಪರಿಹಾರ ಮುಂತಾದ ಎಲ್ಲಾ ವಿವರಗಳನ್ನು ಸೇರಿಸಿ ಮತ್ತು ಸೂಕ್ತವಾದ ದಾಖಲೆಗಳೆಲ್ಲವನ್ನು ಅದಕ್ಕೆ ಲಗತ್ತಿಸಿ.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :**

**https://rbi.org.in/Scripts/Complaints.aspx or cms.rbi.org.in**

# ಸಂದೇಶ–20 ಆರ್.ಬಿ.ಐ.ನ ದೂರು ನಿರ್ವಹಣಾ ವ್ಯವಸ್ಥೆ

ಆರ್.ಬಿ.ಐ ನಿಂದ ನಿಯಂತ್ರಿಸಲ್ಪಟ್ಟ ಯಾವುದೇ ಸಂಸ್ಥೆಗಳ ವಿರುದ್ಧ ಬ್ಯಾಂಕಿಂಗ್ ಲೋಕಪಾಲರಲ್ಲಿ ದೂರು ದಾಖಲಿಸಲು cms.rbi.org.in ಸಂಪರ್ಕಿಸಿ. ಈ ವೆಬ್ ಪುಟದ ಛಾಯಾಚಿತ್ರ ಕೆಳಗಿನಂತಿದೆ.



ಈ ಪೋರ್ಟಲ್, ಬಳಕೆದಾರ ಸ್ನೇಹಿಯಾಗಿದ್ದು ಬಳಕೆದಾರರಿಗೆ ಸ್ವಯಂ ಸಹಾಯ ಮಾಡುವ ವಿಡಿಯೋಗಳನ್ನು ಹೊಂದಿದೆ. ಅದರಲ್ಲಿ ಹೇಗೆ ದೂರು ದಾಖಲಿಸಬೇಕೆಂಬುದರ ಬಗ್ಗೆ ಮಾರ್ಗಸೂಚಿಗಳಿವೆ.

ದೂರು ನೀಡಿದ ನಂತರ ದೂರುದಾರರಿಗೆ ತಕ್ಷಣದಲ್ಲೇ ಎಸ್.ಎಂ.ಎಸ್/ಇ–ಮೇಲ್ ಮೂಲಕ ಸ್ವೀಕೃತಿ ದೊರೆಯುತ್ತದೆ. ಅದರಲ್ಲಿನ ವಿಶಿಷ್ಟವಾದ ಸಂಖ್ಯೆಯ ಮೂಲಕ ಭವಿಷ್ಯದಲ್ಲಿ ನಿಮ್ಮ ದೂರಿನ ಸ್ಥಿತಿಗತಿಯನ್ನು ತಿಳಿದುಕೊಳ್ಳಬಹುದು.

ದೂರುದಾರರು ಇದೇ ಪೋರ್ಟಲ್ ಅನ್ನು ಆರ್.ಬಿ.ಐ ನ ಕುಂದುಕೊರತೆ ಪರಿಹಾರದ ಕುರಿತಾದ ತಮ್ಮ ಅನುಭವಗಳನ್ನು ಹಂಚಿಕೊಳ್ಳಲೂ ಸಹ ಬಳಸಿಕೊಳ್ಳಬಹುದು ಮತ್ತು ಮೇಲ್ಮನವಿಯನ್ನು ದಾಖಲಿಸಲು ಸಹ ಉಪಯೋಗಿಸಿಕೊಳ್ಳಬಹುದು.

ಆರ್.ಬಿ.ಐನ ಗ್ರಾಹಕ ಅರಿವು ಮತ್ತು ಸಂರಕ್ಷಣೆ ಮುಂದೊಡಗುಗಳ ಇತ್ತೀಚಿನ ವಿಡಿಯೋಗಳು ಮತ್ತು ಪೋಸ್ಟರ್‌ಗಳು ಸಹ ಇದರಲ್ಲಿ ಲಭ್ಯವಿದೆ.

**ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ಇಲಾಖೆ**

ಭಾರತೀಯ ರಿಸರ್ವ್ ಬ್ಯಾಂಕ್ (ಆರ್.ಬಿ.ಐ)
10ನೇ ಮಹಡಿ, ಕೇಂದ್ರ ಕಛೇರಿ
ಮುಂಬೈ 400001, ಭಾರತ.